|| ಜೈ ಭೀಮ್ ||



ಅರುಣ್ ಕುಮಾರ್ .ಕೆ ಅವರ ಸಾರಥ್ಯದಲ್ಲಿ

# ವಾಯ್ಸ್ ಆಫ್ ಅರುಣ್

ಕನ್ನಡ ದಿನಪತ್ರಿಕೆ

ಇದು ಭ್ರಷ್ಟರ ವಿರುದ್ಧ

|| ನಮೋ ಬುದ್ಧಯಾ ||



VOICE OF ARUN KANNADA DAILY

PRGI : KARKAN/2022/82620

ಸಂಪುಟ : 1 | Volume : 1

ಭಾನುವಾರ, ಏಪ್ರಿಲ್ 12, 2026 | Sunday, April 12, 2026

ಪುಟ: 4 | Pages : 4

ಬೆಲೆ 1.00 | Rs. 1.00

ಸಂಚಿಕೆ : 209 | Issue : 209

# ಬಂಗಾಳದಲ್ಲಿ ಸಿಎಎ, ಯುಸಿಸಿ ತ್ವರಿತ ಅನುಷ್ಠಾನ:

## ಮಾತುವಾ, ನಮಸುದ್ರರಿಗೆ ಪೌರತ್ವ ನೀಡುತ್ತೇವೆ: ಪ್ರಧಾನಿ ಮೋದಿ

ಪಶ್ಚಿಮ ಬಂಗಾಳದ ಪೂರ್ವ ಬುರ್ದ್ವಾನ್‌ನಲ್ಲಿ ನಡೆದ ಬೃಹತ್ ಚುನಾವಣಾ ರ್ಯಾಲಿಯನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ, ರಾಜ್ಯದ ತೃಣಮೂಲ ಕಾಂಗ್ರೆಸ್ ಸರ್ಕಾರದ ಮೇಲೆ ತೀವ್ರ ವಾಗ್ದಾಳಿ ನಡೆಸಿದರು. ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚಿಸಿದ ತಕ್ಷಣ, ಒಳನುಸುಳುವವರನ್ನು ದೇಶದಿಂದ ಹೊರಹಾಕುತ್ತೇವೆ. ಮಾತುವಾ ಮತ್ತು ನಮಸುದ್ರ ಸಮುದಾಯಗಳ ಸೇರಿದಂತೆ ಎಲ್ಲಾ ನಿರಾಶ್ರಿತರ ಕುಟುಂಬಗಳಿಗೆ ಘನತೆಯಿಂದ ಪೌರತ್ವ ನೀಡಲಾಗುವುದು ಎಂದು ಅವರು ಸ್ಪಷ್ಟವಾಗಿ ಹೇಳಿದರು. ಒಳನುಸುಳುವವರಿಗೆ ನಕಲಿ ದಾಖಲೆಗಳನ್ನು ರಚಿಸಲು ಸಹಾಯ ಮಾಡಿದವರಿಗೆ ಎಚ್ಚರಿಕೆ ನೀಡಿದರು. ಈ ಎಲ್ಲಾ ಪಿತೂರಿಗಾರರನ್ನು ಪ್ರತಿ ಪೈಸೆಗೂ ಹೊಣೆಗಾರರನ್ನಾಗಿ ಮಾಡಲಾಗುತ್ತದೆ ಎಂದರು.

**ಬಂಗಾಳಕ್ಕೆ ಪ್ರಧಾನಿ ಮೋದಿಯವರ '6 ದೊಡ್ಡ ಗ್ಯಾರಂಟಿಗಳು'**

* ಭಯದ ವಾತಾವರಣವನ್ನು ಕೊನೆಗೊಳಿಸಿ, ನಂಬಿಕೆಯ ವಾತಾವರಣ ಸೃಷ್ಟಿ.
* ಸರ್ಕಾರಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಹೊಣೆಗಾರರನ್ನಾಗಿ ಮಾಡಿ.
* ಪ್ರತಿಯೊಂದು ಹಗರಣ ಮತ್ತು ಅನ್ಯಾಯದ ಬಗ್ಗೆ ನಿಷ್ಪಕ್ಷಪಾತ ತನಿಖೆಗಳನ್ನು ಖಚಿತಪಡಿಸಿಕೊಳ್ಳಿ.
* ಭ್ರಷ್ಟಾಚಾರದಲ್ಲಿ ಭಾಗಿಯಾಗಿರುವ ಟಿಎಂಸಿ ನಾಯಕರನ್ನು ಜೈಲಿನ ಹಿಂದೆ ಕಳುಹಿಸಿ.
* ನಿರಾಶ್ರಿತರಿಗೆ ಸಾಂವಿಧಾನಿಕ ಹಕ್ಕುಗಳು ಮತ್ತು ನುಸುಳುಕೋರರ ಗಡೀಪಾರು.
* ರಾಜ್ಯ ಉದ್ಯೋಗಿಗಳಿಗೆ 7ನೇ ವೇತನ ಆಯೋಗದ ಅನುಷ್ಠಾನ.
* ಯುವಕರಿಗೆ ಉದ್ಯೋಗ ಮತ್ತು ಮಹಿಳೆಯರಿಗೆ ರೂ. 3,000 ಉಡುಗೊರೆ.

ನಿರುದ್ಯೋಗ ವಿಷಯದ ಕುರಿತು ಪ್ರಧಾನಿ ಪ್ರಮುಖ ಘೋಷಣೆಗಳನ್ನು ಮಾಡಿದರು. ಬಿಜೆಪಿ ಸರ್ಕಾರವು ಲಕ್ಷಾಂತರ ಯುವಕರಿಗೆ ಉದ್ಯೋಗ ನೀಡುವ ಕೈಗಾರಿಕೆಗಳನ್ನು ಸ್ಥಾಪಿಸುತ್ತದೆ. ಹೆಚ್ಚುವರಿಯಾಗಿ, ಟಿಎಂಸಿ ನೀತಿಗಳಿಂದಾಗಿ ಸರ್ಕಾರಿ ನೇಮಕಾತಿಗಾಗಿ ವಯಸ್ಸಿನ ಮಿತಿಯನ್ನು ದಾಟಿದ ಯುವಕರಿಗೆ ವಿಶೇಷ ವಯಸ್ಸಿನ ಸಡಿಲಿಕೆ ನೀಡಲಾಗುವುದು. ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಮಿಷನ್ ಮೋಡ್‌ನಲ್ಲಿ ಭರ್ತಿ ಮಾಡಲಾಗುತ್ತದೆ ಮತ್ತು ರಾಜ್ಯದಲ್ಲಿ ನಿಯಮಿತವಾಗಿ 'ಉದ್ಯೋಗ ಮೇಳಗಳು' ನಡೆಯಲಿವೆ ಎಂದರು.



**ಡಬಲ್ ಎಂಜಿನ್ ಸರ್ಕಾರದಿಂದ ರೈತರಿಗೆ ಡಬಲ್ ಪ್ರಯೋಜನಗಳು**

ಎಂಎಸ್‌ಪಿ ಹೆಸರಿನಲ್ಲಿ ಟಿಎಂಸಿ ರಾಜ್ಯದ ಆಲೂಗಡ್ಡೆ ರೈತರನ್ನು ವಂಚಿಸಿದೆ ಎಂದು ಪ್ರಧಾನಿ ಆರೋಪಿಸಿದರು. ಇದರಿಂದಾಗಿ ಅವರ ಉತ್ಪನ್ನಗಳು ಇಂದು ಕೊಳೆಯುತ್ತಿವೆ. ಬಂಗಾಳದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣ, ಪಿಎಂ ಕಿಸಾನ್ ಸಮ್ಮಾನ್ ನಿಧಿ (ಪಿಎಂ ಕಿಸಾನ್ ಸಮ್ಮಾನ್ ನಿಧಿ) ಅಡಿಯಲ್ಲಿ ರೈತರು ಪಡೆಯುವ ಮೊತ್ತವನ್ನು 9,000ಕ್ಕೆ ಹೆಚ್ಚಿಸಲಾಗುವುದು ಎಂದು ಅವರು ಘೋಷಿಸಿದರು. ಕೇಂದ್ರ ಸರ್ಕಾರ 6,000 ನೀಡುತ್ತದೆ ಮತ್ತು ರಾಜ್ಯ ಬಿಜೆಪಿ ಸರ್ಕಾರ 3,000 ಸೇರಿಸುತ್ತದೆ.

**ಭಯ ಬೇಡ, ನಂಬಿಕೆ**

ತಮ್ಮ ಭಾಷಣದ ಕೊನೆಯಲ್ಲಿ, ಪ್ರಧಾನಿ ಮೋದಿ "ಭಯೋಯ್‌ನೋಭೋರೋಸಾ" (ಭಯ ಬೇಡ ಭರವಸೆ) ಎಂಬ ಘೋಷಣೆಯನ್ನು ಕೂಗಿದರು. ಟಿಎಂಸಿಯ 15 ವರ್ಷಗಳ ಆಡಳಿತವು ಭಯ ಮತ್ತು ಲೂಟಿಯ ವಾತಾವರಣವನ್ನು ಮಾತ್ರ ಸೃಷ್ಟಿಸಿದೆ. ಈ ಚುನಾವಣೆಯು ಈ ಭಯವನ್ನು ನಿರ್ಮೂಲನೆ ಮಾಡುವ ಬಗ್ಗೆ. ಬಿಜೆಪಿ ಯಾವುದೇ ಸಾರ್ವಜನಿಕ ಕಲ್ಯಾಣ ಯೋಜನೆಗಳನ್ನು ನಿಲ್ಲಿಸುವುದಿಲ್ಲ. ಆದರೆ ಟಿಎಂಸಿಯ "ಭ್ರಷ್ಟಾಚಾರದ ಅಂಗಡಿ"ಯನ್ನು ಮಾತ್ರ ಮುಚ್ಚುತ್ತದೆ ಎಂದು ಅವರು ಹೇಳಿದರು.

# ಕಾಂಗ್ರೆಸ್ ಒಳಗಿನ ಸಮಸ್ಯೆಗಳನ್ನು ಬಗೆಹರಿಸಲು ಸಂಪುಟ ಪುನಾರಚನೆ ಅಗತ್ಯ: ಸತೀಶ್ ಜಾರಕಿಹೊಳಿ



ಬೆಳಗಾವಿ: ಕಾಂಗ್ರೆಸ್ ಪಕ್ಷದ ಒಳಗಿನ ಸಮಸ್ಯೆಗಳನ್ನು ಪರಿಹರಿಸಬೇಕಿದ್ದು, ಸಚಿವ ಸಂಪುಟ ಪುನಾರಚನೆ ಅಗತ್ಯವಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೋಳಿ ಹೇಳಿದ್ದಾರೆ.

ನಿನ್ನೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸರ್ಕಾರಕ್ಕೆ ಸುಮಾರು 30 ತಿಂಗಳುಗಳ ಅವಧಿ ಪೂರ್ಣಗೊಂಡಿರುವುದರಿಂದ ಈಗ ಸಚಿವ ಸಂಪುಟ ಪುನಾರಚನೆಗೆ ಗಮನ ಹರಿಸುವ ಸಮಯ ಬಂದಿದೆ ಎಂದು ಹೇಳಿದರು.

ಬಾಗಲಕೋಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೆ ತಾವು ಕೆಪಿಸಿಸಿ ಅಧ್ಯಕ್ಷರಾಗುವಿರಾ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಕೆಪಿಸಿಸಿ ನಾಯಕತ್ವದಲ್ಲಿ ಬದಲಾವಣೆ ಅಗತ್ಯ ಮತ್ತು ಅನಿವಾರ್ಯವಾಗಿದೆ ಎಂದು ಹೇಳಿದರು. ಆದರೆ ಅಂತಿಮ ನಿರ್ಧಾರವನ್ನು ಪಕ್ಷದ ಹೈಕಮಾಂಡ್ ತೆಗೆದುಕೊಳ್ಳುತ್ತದೆ ಎಂದರು.

ಆಂತರಿಕ ಮೀಸಲಾತಿ ಜಾರಿಗೆ ಸಂಬಂಧಿಸಿದ ಪ್ರಶ್ನೆಗೆ, ಸರ್ಕಾರ ಬದ್ಧವಾಗಿದೆ ಆದರೆ ಜಾರಿಗೆ ಮುನ್ನ ಸುಪ್ರೀಂ ಕೋರ್ಟ್ ಸೂಚನೆಯಂತೆ ಸಂಬಂಧಿತ ಅಂಕಿಅಂಶಗಳನ್ನು ಸಂಗ್ರಹಿಸಬೇಕಿದೆ ಎಂದು ಹೇಳಿದರು. ಯಾವುದೇ ಸಮುದಾಯದ ವಿರುದ್ಧ ಸರ್ಕಾರ ಇಲ್ಲ, ಎಲ್ಲರ ಅಭಿವೃದ್ಧಿ ಮುಖ್ಯವಾಗಿದೆ ಎಂದರು.

ಬಾಗಲಕೋಟೆ ಉಪ ಚುನಾವಣೆಯಲ್ಲಿ ಹಣ ಹಂಚಿಕೆಯ ಬಗ್ಗೆ ಬಿಜೆಪಿ ಆರೋಪಗಳಿಗೆ ಪ್ರತಿಕ್ರಿಯಿಸಿದ ಅವರು, ಎಲ್ಲಾ ಪಕ್ಷಗಳೂ ಇಂತಹ ಕ್ರಮಗಳಲ್ಲಿ ತೊಡಗುತ್ತವೆ ಮತದಾರರಿಗೆ 10 ರೂಪಾಯಿಯಾಗಲಿ 1,000 ರೂಪಾಯಿಯಾಗಲಿ ಕೊಡುವುದೂ ತಪ್ಪೇ ಎಂದು ಹೇಳಿದರು.

ಇದಲ್ಲದೆ, ಉಪಚುನಾವಣೆಗಳ ಹೆಚ್ಚಿನ ವೆಚ್ಚವನ್ನು ತಪ್ಪಿಸಲು, ಹಾಲಿ ಇರುವ ಶಾಸಕರು ಸಾವಿಗೀಡಾದರೆ ಅದೇ ಪಕ್ಷಕ್ಕೆ ಬದಲಿ ಅಭ್ಯರ್ಥಿಯನ್ನು ನಾಮನಿರ್ದೇಶನ ಮಾಡಲು ಅವಕಾಶ ನೀಡುವಂತಹ ಹೊಸ ಕಾನೂನು ತರಬೇಕು ಎಂದು ಅವರು ಸಲಹೆ ನೀಡಿದರು.

# ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಪರ್ಯಾಯ:

## ಆನೇಕಲ್ ಬಳಿ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ 943 ಕೋಟಿ ರೂ ಟೆಂಡರ್!

ಬೆಂಗಳೂರು: ನಗರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಅಂತಾರಾಷ್ಟ್ರೀಯ ಬಹುಕ್ರೀಡಾ ಸಮುಚ್ಚಯ ನಿರ್ಮಾಣ ಪ್ರಕ್ರಿಯೆಗೆ ಕರ್ನಾಟಕ ಗೃಹ ಮಂಡಳಿ (ಕೆಎಚ್‌ಬಿ) ಅಧಿಕೃತವಾಗಿ ಚಾಲನೆ ನೀಡಿದ್ದು, ಮೊದಲ ಹಂತದಲ್ಲಿ ಅಂತಾರಾಷ್ಟ್ರೀಯ




ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ಮುಂದಾಗಿದೆ. ಕಳೆದ ವರ್ಷ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ದುರಂತದ ನಂತರ, ಕೆಎಚ್‌ಬಿ ಚಿನ್ನಸ್ವಾಮಿ ಸ್ಟೇಡಿಯಂ ಮೇಲಿನ ಒತ್ತಡ ಕಡಿಮೆ ಮಾಡುವುದು ಮತ್ತು ಆನೇಕಲ್ ಭಾಗದಲ್ಲಿ ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿಪಡಿಸುವ ದೂರದೃಷ್ಟಿಯೊಂದಿಗೆ ಇಂಡ್ಲವಾಡಿಯಲ್ಲಿ ಬಹುಕ್ರೀಡಾ ಸಮುಚ್ಚಯ ನಿರ್ಮಾಣಕ್ಕೆ ಸರಕಾರ ನಿರ್ಧರಿಸಿತು.

ಈ ನಿಟ್ಟಿನಲ್ಲಿ ಆನೇಕಲ್ ತಾಲೂಕಿನ ಇಂಡ್ಲವಾಡಿಯ ಸೂರ್ಯನಗರ 4 ನೇ ಹಂತದ ಬಡಾವಣೆಯ 75 ಎಕರೆ ಪ್ರದೇಶದಲ್ಲಿ 80,000 ಆಸನ ಸಾಮರ್ಥ್ಯದ ಕ್ರಿಕೆಟ್ ಸ್ಟೇಡಿಯಂ ಸೇರಿದಂತೆ ಅತ್ಯಾಧುನಿಕ ಅಂತಾರಾಷ್ಟ್ರೀಯ ಬಹುಕ್ರೀಡಾ ಸಮುಚ್ಚಯ ನಿರ್ಮಾಣ ಮಾಡುವ ಕುರಿತು ರಾಜ್ಯ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಇದಕ್ಕೆ ರಾಜ್ಯ ಸರಕಾರ 2025 ರಲ್ಲಿ ಆಗಸ್ಟ್‌ನಲ್ಲಿ ಅನುಮತಿ ನೀಡಿತ್ತು. ಅಲ್ಲದೆ, ಪ್ರಸಕ್ತ ವರ್ಷದ ಬಜೆಟ್‌ನಲ್ಲಿಯೂ ಯೋಜನೆಯ ಅನುಷ್ಠಾನವನ್ನು ಅಧಿಕೃತವಾಗಿ ಘೋಷಣೆ ಮಾಡಿದ್ದು, ಈ ಹಿನ್ನೆಲೆಯಲ್ಲಿ ಯೋಜನಾ ಪ್ರಕ್ರಿಯೆ ಶುರು ಮಾಡಿದೆ.

ಕ್ರಿಕೆಟ್ ಸ್ಟೇಡಿಯಂ, ಬ್ಯಾಡ್ಮಿಂಟನ್, ಬಾಸ್ಕೆಟ್‌ಬಾಲ್, ಪುಟ್ಬಾಲ್, ಹಾಕಿ, ಟೆನ್ನಿಸ್, ವಾಲಿಬಾಲ್, ಸ್ವಿಮ್ಮಿಂಗ್, ಟೇಬಲ್ ಟೆನ್ನಿಸ್, ಅಥ್ಲೆಟಿಕ್ಸ್, ಹ್ಯಾಂಡ್‌ಬಾಲ್, ಖೋ–ಖೋ, ಕಧಿಬಡ್ಡಿ, ಕರಾಟೆ, ವರ್ಸಟೈಲಿಂಗ್, ವೇಟ್ ಲಿಫ್ಟಿಂಗ್, ಜುಡೋ ಸೇರಿದಂತೆ ಎಲ್ಲ ಒಳಾಂಗಣ, ಹೊರಾಂಗಣ ಕ್ರೀಡೆಗಳಿಗೆ ಅನುಕೂಲಕರವಾದ ಸೌಲಭ್ಯ, ವಸತಿ, ಪಾರ್ಕಿಂಗ್, ಜಿಮ್ , ಈಜುಕೊಳ, ಅತಿಥಿ ಗೃಹಗಳು, ಹಾಸ್ಟೆಲ್‌ಗಳು ಮತ್ತು ಹೋಟೆಲ್‌ಗಳೂ ಸೇರಿದಂತೆ ಅತ್ಯಾಧುನಿಕ ವ್ಯವಸ್ಥೆಗಳನ್ನು ಒಳಗೊಂಡ ಅಂತಾರಾಷ್ಟ್ರೀಯ ಬಹುಕ್ರೀಡಾ ಸಮುಚ್ಚಯ ನಿರ್ಮಾಣ 75 ಎಕರೆಯಲ್ಲಿ ಸುಮಾರು 1,980 ಕೋಟಿ ರೂ. ವೆಚ್ಚದಲ್ಲಿ ಒಂದೇ ಹಂತದಲ್ಲಿ ನಿರ್ಮಿಸಲು ಮೊದಲ ಯೋಜಿಸಲಾಗಿತ್ತು. ಆದರೆ, ಒಂದೇ ಹಂತದಲ್ಲಿ ನಿರ್ಮಾಣ ಕಷ್ಟ ಹಾಗೂ ವಿಳಂಬವಾಗಲಿದೆ. ಮೊದಲ ಹಂತದಲ್ಲಿಸುಮಾರು 1,000 ಕೋಟಿ ರೂ ಅಂದಾಜು ವೆಚ್ಚದಲ್ಲಿ 80,000 ಆಸನ ಸಾಮರ್ಥ್ಯದ ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕೆ ನಿರ್ಧರಿಸಿ, ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ.

# ಪಿಯುಸಿಯಲ್ಲಿ ನಿರೀಕ್ಷಿತ ಫಲಿತಾಂಶ ಬಾರದ ಹಿನ್ನೆಲೆ ವಿದ್ಯಾರ್ಥಿನಿ ಆತ್ಮಹತ್ಯೆ

ಹುಬ್ಬಳ್ಳಿ: ದ್ವಿತೀಯ ಪಿಯುಸಿಯಲ್ಲಿ ನಿರೀಕ್ಷಿತ ಫಲಿತಾಂಶ ಬಾರದ ಹಿನ್ನೆಲೆಯಲ್ಲಿ ಮನನೊಂದು ವಿದ್ಯಾರ್ಥಿನಿಯೊಬ್ಬಳು ಆತ್ಮಹತ್ಯೆ ಮಾಡಿಕೊಂಡ ಘಟನೆ ಉಣಕಲ್‌ನ ಸಿದ್ಧಕಲ್ಯಾಣ ನಗರದಲ್ಲಿ ನಡೆದಿದೆ. ಶ್ರಾವಣಿ ಮಾರುತಿ ಕಾಳೆ(18) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ. ವಿದ್ಯಾನಗರದ ಕನಕದಾಸ ಕಾಲೇಜಿನಲ್ಲಿ ಓದುತ್ತಿದ್ದ ಶ್ರಾವಣಿ, ಈ ಬಾರಿಯ ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದಳು. ವಾಣಿಜ್ಯ ವಿಭಾಗದಲ್ಲಿ ಶೇ.77% ಆಗಿದ್ದರೂ ಕೂಡ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಶ್ರಾವಣಿ ತಂದೆ ಮಾರುತಿ ಆಟೋ ಓಡಿಸಿ ಜೀವನ ನಡೆಸುತ್ತಾರೆ. ಮನೆಯಲ್ಲಿ ಓದಲು ಆಗಲ್ಲ ಅಂತ ಉಣಕಲ್‌ನ ಅಜ್ಜಿ, ತಾತನ ಮನೆಯಲ್ಲಿ ಬಿಟ್ಟಿದ್ದರು. ಆಕೆ ಜಾಣೆಯಾಗಿದ್ದು, ಈ ಪರೀಕ್ಷೆಯಲ್ಲೂ ಶೇ.95% ರಷ್ಟು ಫಲಿತಾಂಶ ಬರುವ ನಿರೀಕ್ಷೆ ಇಟ್ಟುಕೊಂಡಿದ್ದಳು. ಆದ್ರೆ ತಾನು ನಿರೀಕ್ಷೆ ಮಾಡಿದ ಫಲಿತಾಂಶ ಬಾರದ ಹಿನ್ನೆಲೆಯಲ್ಲಿ ಮನೆಯಲ್ಲೇ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಕುಟುಂಬಸ್ಥರು ತಿಳಿಸಿದ್ದಾರೆ.

ಮೃತಳ ತಂದೆ ಮಾರುತಿ ಕಾಳೆ ಮಾತನಾಡಿ, ನಾವು ಹುಬ್ಬಳ್ಳಿಯಲ್ಲಿ ವಾಸವಾಗಿದ್ದರೆ ಮಗಳು ಅವರ ತಾತನ ಮನೆಯಲ್ಲಿಯೇ ಚಿಕ್ಕವಳಿದ್ದಾಗಿನಿಂದ ವಿದ್ಯಾಭ್ಯಾಸ ಮಾಡುತ್ತಿದ್ದಳು. ಈ ಪರೀಕ್ಷೆಯಲ್ಲಿ ಶೇ.98ರಷ್ಟು ಮಾರ್ಕ್ಸ್ ತಗೆದುಕೊಳ್ಳುತ್ತೇನೆ ಎಂದು ಹೇಳುತ್ತಿದ್ದಳು. ಸಾಯಿ ನಗರದ ಎಲ್ಲರಿಗೂ ಹೇಳಿಕೊಂಡು ತಿರುಗಿದ್ದಳು. ಆದರೆ ಶೇ.77



ಫಲಿತಾಂಶ ಬಂದಿದೆ. ತಾನು ಹೇಳಿಕೊಂಡಷ್ಟು ಅಂಕ ಬಂದಿಲ್ಲ ಎಂದು ಮಾನಸಿಕವಾಗಿ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದರು.

ನಿನ್ನೆ ಅವರ ಅಜ್ಜನಿಗೆ ಬೆಳಗ್ಗೆ ಚಹಾ, ಮಧ್ಯಾಹ್ನ ಊಟ ಕೊಟ್ಟಿದ್ದಾಳೆ. ಆದ್ರೆ ಸಾಯಂಕಾಲ ಚಹ ಕೊಡುತ್ತಿದ್ದಳು. ಯಾಕೆ ಕೊಟ್ಟಿಲ್ಲ ಎಂದು ಮನೆಯ ಮೇಲೆ ಓದುತ್ತಿದ್ದ ರೂಮ್‌ನಲ್ಲಿ ಹೋಗಿ ನೋಡಿದಾಗ ಸಾವನ್ನಪ್ಪಿರುವುದು ಬೆಳಕಿಗ ಬಂದಿದೆ. ನಾವು ಮಾರ್ಕ್ಸ್ ಕಡಿಮೆ ಬಂದಿವೆ ಅಂತ ಯಾವಾಗಲೂ ಕೇಳಿಲ್ಲ. ಆದ್ರೂ ಈ ರೀತಿ ಆಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಮೃತಳ ಅಜ್ಜ ಮಹಾನಿಂಗ ಮಾತನಾಡಿ, ಶ್ರಾವಣಿ ತುಂಬಾ ಬುದ್ಧಿವಂತೆಯಾಗಿದ್ದಳು. ಚಿಕ್ಕವಳಿದ್ದಾಗಿನಿಂದಲೂ ನಮ್ಮ ಮನೆಯಲ್ಲಿಯೇ ಬೆಳೆದಿದ್ದಾಳೆ. ಆದ್ರೆ ಈ ಪರೀಕ್ಷೆಯಲ್ಲಿ ಎಷ್ಟು ಮಾರ್ಕ್ ತಗೆದುಕೊಂಡಿದ್ದಾಳೋ ಗೊತ್ತಿಲ್ಲ. ದ್ವಿತಿಯ ಪಿಯುಸಿಯಲ್ಲಿ 600ಕ್ಕೆ 600 ಅಂಕ ತೆಗೆದುಕೊಳ್ಳುವ ಗುರಿ ಇಟ್ಟುಕೊಂಡಿದ್ದಳು. ಫಲಿತಾಂಶ ಸಹ ಚೆನ್ನಾಗಿ ಬಂದಿದೆ. ಆದ್ರೆ ಅವಳಿಗೆ ಸಮಾಧಾನ ತಂದಿಲ್ಲ. ಹೀಗಾಗಿ ಫಲಿತಾಂಶ ಬಂದ ಬಳಿಕ ಯಾರ ಜೊತೆಗೂ ಮಾತನಾಡದೆ ನೇರವಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಕಣ್ಣೀರಿಟ್ಟರು.

ಸಮಾಜದ ಮುಖಂಡ ಹಾಗೂ ಸಂಬಂಧಿ ಧರ್ಮರಾಜ್ ಅರಿಣಶಿಕಾರಿ ಈಟಿವಿ ಭಾರತಕ್ಕೆ ಪ್ರತಿಕ್ರಿಯಿಸಿ, ಇದೊಂದು ಅತ್ಯಂತ ನೋವಿನ ಸಂಗತಿ. ಪೋಷಕರು ಮಕ್ಕಳನ್ನು ಶಾಲೆ ಕಳುಹಿಸಲು ಎಷ್ಟು ಕಾಳಜಿ ಇಡಬೇಕು ಎಂಬುದಕ್ಕೆ ಇದು ಪ್ರತ್ಯಕ್ಷ ಸಾಕ್ಷಿಯಾಗಿದೆ. ಮಕ್ಕಳು ಪರೀಕ್ಷೆಯಲ್ಲಿ ಒಮ್ಮೆ ಹೆಚ್ಚು ಮಾರ್ಕ್ಸ್ ತಗೆದುಕೊಳ್ಳಬಹುದು. ಮತ್ತೊಮ್ಮೆ ಕಡಿಮೆ ತೆಗೆದುಕೊಳ್ಳಬಹುದು. ಆಗ ನಾವು ಮಕ್ಕಳನ್ನು ಜಾಗೃತಿಯಿಂದ ನೋಡಿಕೊಳ್ಳಬೇಕಿದೆ. ಅಂಕಗಳು ಕಡಿಮೆ ಬಂದಿದ್ದಕ್ಕೆ ಈ ರೀತಿ ದುಡುಕಿನ ನಿರ್ಧಾರ ತೆಗೆದುಕೊಂಡಿದ್ದಾಳೆ ಎಂದರು.

# ಎಲೆಕ್ಟ್ರಿಕ್ ಕಾರುಗಳ ಮೇಲೆ ರಸ್ತೆ ತೆರಿಗೆ, ನೋಂದಣಿ ಶುಲ್ಕಗಳು ಶೂನ್ಯ:

# ಇವಿ ನೀತಿಯ ಕರಡು ಬಿಡುಗಡೆ ಮಾಡಿದ ದೆಹಲಿ ಸರ್ಕಾರ

ನವದೆಹಲಿ: ವಾಯುಗುಣಮಟ್ಟ ಕಾಪಾಡುವ ಜೊತೆಗೆ ಗ್ರಾಹಕರ ಮೇಲೆ ವೆಚ್ಚದ ಹೊರೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ದೆಹಲಿ ಸರ್ಕಾರ ಮಹತ್ವಾಕಾಂಕ್ಷೆಯ ಎಲೆಕ್ಟ್ರಿಕ್ ವಾಹನ ನೀತಿ 2026ರ ಕರಡನ್ನು ಬಿಡುಗಡೆ ಮಾಡಿದೆ. ಈ ಬೃಹತ್ ಯೋಜನೆ ಘೋಷಿಸಿದ ಮುಖ್ಯಮಂತ್ರಿ ರೇಖಾ ಗುಪ್ತಾ, ಇನ್ನು ಮುಂದೆ ದೆಹಲಿಯ ರಸ್ತೆಗಳಲ್ಲಿ ಹೊಗೆಯಲ್ಲ, ವಿದ್ಯುತ್ ಚಲಿಸುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ. ಈ ಉದ್ದೇಶಕ್ಕಾಗಿ ಸರ್ಕಾರ 3,954.25 ಕೋಟಿಗಳ ಭಾರಿ ಬಜೆಟ್ ನಿಗದಿಪಡಿಸಿದೆ.

ದೆಹಲಿ ಸರ್ಕಾರವು ತನ್ನ ಹೊಸ ವಿದ್ಯುತ್ ವಾಹನ ನೀತಿಯ ಕರಡನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡಿದ್ದು, ಅದನ್ನು ಜಾರಿಗೆ ತರುವ ಮೊದಲು ನಾಗರಿಕರು ಮತ್ತು ತಜ್ಞರಿಂದ ಸಲಹೆಗಳು ಮತ್ತು ಪ್ರತಿಕ್ರಿಯೆಗಳನ್ನು ಆಹ್ವಾನಿಸಿದೆ. ಸಾರ್ವಜನಿಕರ ಅಭಿಪ್ರಾಯಗಳನ್ನು ಆಧರಿಸಿ ಅಗತ್ಯ ಬದಲಾವಣೆಗಳನ್ನು ಸೇರಿಸಿದ ನಂತರ ನೀತಿಯನ್ನು ಅಂತಿಮಗೊಳಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿದ್ಯುತ್ ವಾಹನಗಳ ಖರೀದಿ ಮತ್ತು ಬಳಕೆಯನ್ನು ಉತ್ತೇಜಿಸುವ ಮೂಲಕ ನಗರದಲ್ಲಿ ವಾಹನ ಮಾಲಿನ್ಯವನ್ನು ಕಡಿಮೆ ಮಾಡುವುದು ಇದರ ಉದ್ದೇಶವಾಗಿದೆ.

ಸಬ್ಸಿಡಿಗಳ 'ಸೂಪರ್ ಡೋಸ್': ಹೊಸ ಕರಡು ವಿದ್ಯುತ್ ವಾಹನ ನೀತಿಯಲ್ಲಿ, ಸರ್ಕಾರವು ವಿದ್ಯುತ್ ವಾಹನ ಖರೀದಿಗೆ ಪ್ರೋತ್ಸಾಹಕಗಳನ್ನು ಮೂರು ವರ್ಷಗಳ ಸ್ಲ್ಯಾಬ್‌ಗಳಾಗಿ ವಿಂಗಡಿಸಿದೆ. ಮುಖ್ಯವಾಗಿ, ಮೊದಲು ಬಂದವರಿಗೆ ಆದ್ಯತೆಯ ಆಧಾರದ ಮೇಲೆ ಪ್ರಯೋಜನಗಳನ್ನು ಒದಗಿಸಲಾಗುತ್ತದೆ. ಮೊದಲ ವರ್ಷದಲ್ಲಿ ಎಲೆಕ್ಟ್ರಿಕ್ ದ್ವಿಚಕ್ರ ವಾಹನವನ್ನು ಖರೀದಿಸಿದರೆ, ನಿಮಗೆ 30,000ರೂವರೆಗೆ ನೇರ ಸಬ್ಸಿಡಿ ಸಿಗುತ್ತದೆ.

2.25 ಲಕ್ಷಕ್ಕಿಂತ ರೂ ಕಡಿಮೆಯಿದ್ದರೆ, ಎರಡನೇ ವರ್ಷದಲ್ಲಿ ಇದು 20,000ರೂ ಮತ್ತು ಮೂರನೇ ವರ್ಷದಲ್ಲಿ 10,000ರೂ ಕ್ಕೂ ಹೆಚ್ಚಾಗುತ್ತದೆ.

2030 ಮಾರ್ಚ್ 31ರವರೆಗೆ 30ಲಕ್ಷದವರೆಗಿನ ಎಲೆಕ್ಟ್ರಿಕ್ ಕಾರುಗಳ ಮೇಲೆ ರಸ್ತೆ ತೆರಿಗೆ ಮತ್ತು ನೋಂದಣಿ ಶುಲ್ಕಗಳು ಶೂನ್ಯವಾಗಿರುತ್ತದೆ.

ಹೈಬ್ರಿಡ್ ಕಾರುಗಳು ಸಹ 50ರಷ್ಟು ರಿಯಾಯಿತಿಯನ್ನು ಪಡೆಯುತ್ತವೆ.

ವಾಣಿಜ್ಯ ವಾಹನಗಳು (ಇ–ಆಟೋಗಳು) ಮೊದಲ ವರ್ಷದಲ್ಲಿ 50,000 ಮತ್ತು ಇ–ಲೋಡರ್‌ಗಳು (ಎನ್‌ಐ ವರ್ಗ) ಮೊದಲ ವರ್ಷದಲ್ಲಿ 1 ಲಕ್ಷದವರೆಗೆ ಪಡೆಯುತ್ತವೆ.

ಸರ್ಕಾರದ ಕರಡು ವಿದ್ಯುತ್ ವಾಹನ ನೀತಿಯ ಕುರಿತು ಸಲಹೆಗಳನ್ನು ನೀಡಲು ಬಯಸುವ ಸಾರ್ವಜನಿಕರು ಮೇ 10ರವರೆಗೆ ಸರ್ಕಾರದ ಸಾರಿಗೆ ಇಲಾಖೆಯ ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ಸರ್ಕಾರವು ಕೆಲವು ದಿನಗಳ ನಂತರ ಅಂತಿಮ ನೀತಿಯನ್ನು ಬಿಡುಗಡೆ ಮಾಡುತ್ತದೆ. ಮೇ 10 ರವರೆಗೆ ಜನರು ತಮ್ಮ ಸಲಹೆಗಳನ್ನು ಈ ರೀತಿ ನೀಡಬಹುದು.

ಸರ್ಕಾರ ಹೊರಡಿಸಿರುವ ಕರಡು ನೀತಿಯನ್ನು ಎಲ್ಲ ಪಾಲುದಾರರು ಮತ್ತು



ಸಾರ್ವಜನಿಕರ ಮಾಹಿತಿಗಾಗಿ ಅಧಿಕೃತ ವೆಬ್‌ಸೈಟ್ https://transport.delhi.gov.in ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಈ ಕರಡು ನೀತಿಯ ಕುರಿತು ಸಲಹೆಗಳು ಮತ್ತು ಕಾಮೆಂಟ್‌ಗಳನ್ನು ಇಲಾಖೆ ಆಹ್ವಾನಿಸಿದೆ ಮತ್ತು ಆಸಕ್ತ ವ್ಯಕ್ತಿಗಳು ಸೂಚನೆ ಪ್ರಕಟವಾದ ದಿನಾಂಕದಿಂದ 30 ದಿನಗಳಲ್ಲಿ, ಅಂದರೆ ಮೇ 10 ರೊಳಗೆ ತಮ್ಮ ಅಭಿಪ್ರಾಯಗಳನ್ನು ಕಳುಹಿಸಬಹುದು. ಸಲಹೆಗಳನುß evpolicy2026@gmail.com ಗೆ ಇಮೇಲ್ ಮೂಲಕ ಕಳುಹಿಸಬಹುದು, ಆದರೆ ಅರ್ಜಿಗಳನ್ನು ಜಂಟಿ ಆಯುಕ್ತರು (ಇಗಿ), ಸಾರಿಗೆ ಇಲಾಖೆ, GNCTD, 5/9, ಅಂಡರ್ ಹಿಲ್ ರಸ್ತೆ, ದೆಹಲಿ–110054 ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಲು ವ್ಯವಸ್ಥೆ ಮಾಡಲಾಗಿದೆ. ನಿಮ್ಮ ಹಳೆಯ ಕಾರು ಸ್ಕ್ರ್ಯಾಪ್ ಮಾಡಿದರೆ ಸಿಗಲಿದೆ ಲಕ್ಷ ರೂ: ನಿಮ್ಮ ಹಳೆಯ ಪೆಟ್ರೋಲ್ ಅಥವಾ ಡೀಸೆಲ್ ವಾಹನವನ್ನು (ಬಿಎಸ್ 4 ಅಥವಾ ಹಳೆಯದು) ಸ್ಕ್ರ್ಯಾಪ್ ಮಾಡಿದರೆ, ಹೊಸ ಇ–ಕಾರ್ ಖರೀದಿಯ ಮೇಲೆ ನಿಮಗೆ 1,00,000 ದವರೆಗೆ ಪ್ರತ್ಯೇಕ ರಿಯಾಯಿತಿ ಸಿಗುತ್ತದೆ. ಅದೇ ರೀತಿ, ದ್ವಿಚಕ್ರ ವಾಹನಗಳಿಗೆ 10,000 ರೂ ಮತ್ತು ತ್ರಿಚಕ್ರ ವಾಹನಗಳಿಗೆ 25,000 ರೂ ಸ್ಕ್ರ್ಯಾಪಿಂಗ್ ಬೋನಸ್ ನೀಡಲಾಗುತ್ತದೆ. ಅಧಿಕೃತ ಸ್ಕ್ರ್ಯಾಪಿಂಗ್ ಕೇಂದ್ರದಿಂದ ಪ್ರಮಾಣಪತ್ರ ಪಡೆದ 6 ತಿಂಗಳೊಳಗೆ ಹೊಸ ವಾಹನವನ್ನು ಖರೀದಿಸಬೇಕು ಎಂಬುದು ಷರತ್ತು.ಗಡುವು ನಿಗದಿ: 2027ರ ನಂತರ ಪೆಟ್ರೋಲ್ ಚಾಲಿತ ಆಟೋಗಳ ಬದಲಾಗಿ ಸಂಪೂರ್ಣವಾಗಿ ವಿದ್ಯುತ್ ಮೋಡ್‌ಗೆ ಪರಿವರ್ತಿಸಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದೆ. 2027 ಜನವರಿ 1ರಿಂದ, ದೆಹಲಿಯಲ್ಲಿ ಹೊಸ ಪೆಟ್ರೋಲ್ಸಿ, ಎನ್‌ಜಿ ತ್ರಿಚಕ್ರ ವಾಹನಗಳ ನೋಂದಣಿಯನ್ನು ಸಂಪೂರ್ಣವಾಗಿ ನಿಲ್ಲಿಸಲಾಗುತ್ತದೆ. ವಿದ್ಯುತ್ ತ್ರಿಚಕ್ರ ವಾಹನಗಳನ್ನು ಮಾತ್ರ ನೋಂದಾಯಿಸಲಾಗುತ್ತದೆ. 2028 ಏಪ್ರಿಲ್ 1ರಿಂದ, ದ್ವಿಚಕ್ರ ವಾಹನ ವಿಭಾಗದಲ್ಲಿ ವಿದ್ಯುತ್ ವಾಹನಗಳನ್ನು ಮಾತ್ರ ಅನುಮತಿಸಲಾಗುತ್ತದೆ. ಮಕ್ಕಳ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು, 2030 ರ ವೇಳೆಗೆ ಶಾಲಾ ಬಸ್‌ಗಳಲ್ಲಿ ಶೇ 30ರಷ್ಟು ವಿದ್ಯುತ್ ಚಾಲಿತ ಬಸ್‌ಗಳನ್ನು ಪರಿವರ್ತಿಸುವುದು ಕಡ್ಡಾಯ.

ಚಾರ್ಜಿಂಗ್ ಸಮಸ್ಯೆ ದೂರ: ವಿದ್ಯುತ್ ವಾಹನ ಖರೀದಿದಾರರಿಗೆ ಚಾರ್ಜಿಂಗ್ ದೊಡ್ಡ ಸಮಸ್ಯೆಯಾಗಿದೆ. ಇದನ್ನು ಪರಿಹರಿಸಲು, ಸರ್ಕಾರವು ಚಾರ್ಜಿಂಗ್ ಕೇಂದ್ರಗಳ ಜಾಲವನ್ನು ಸ್ಥಾಪಿಸಲು 1,000 ಕೋಟಿ ರೂ ಖರ್ಚು ಮಾಡಲಿದೆ. ದೆಹಲಿ ಟ್ರಾನ್ಸ್‌ಕೋ ಲಿಮಿಟೆಡ್‌ಗೆ ಈ ಜವಾಬ್ದಾರಿಯನ್ನು ವಹಿಸಲಾಗಿದೆ. ಹತ್ತಿರದ ಚಾರ್ಜಿಂಗ್ ಪಾಯಿಂಟ್ ಮತ್ತು ಲಭ್ಯವಿರುವ ಸ್ಲಾಟ್‌ಗಳು ಲಭ್ಯವಿದೆಯೇ ಎಂದು ನಿಮಗೆ ತಿಳಿಸಲು ಅಪ್ಲಿಕೇಶನ್ ಅಥವಾ ಪೋರ್ಟಲ್ ಲಭ್ಯವಿರುತ್ತದೆ.

ಸರ್ಕಾರಿ ಬಾಡಿಗೆ ವಾಹನಗಳ ಸಮೂಹದಲ್ಲಿರುವ ಎಲ್ಲ ವಾಹನಗಳು ಈಗ ವಿದ್ಯುತ್ ಚಾಲಿತವಾಗಿರುತ್ತವೆ ಎಂದು ಮುಖ್ಯಮಂತ್ರಿ ಘೋಷಿಸಿದ್ದಾರೆ. ಇದಲ್ಲದೇ, ದೆಹಲಿಯಿಂದ ಇತರ ರಾಜ್ಯಗಳಿಗೆ ಕಾರ್ಯನಿರ್ವಹಿಸುವ ಎಲ್ಲ ಹೊಸ ಬಸ್‌ಗಳು ಸಹ ಇ ಬಸ್‌ಗಳಾಗಿರುತ್ತವೆ ಎಂದಿದ್ದಾರೆ

ಬಜೆಟ್ ವಿವರ

ಒಟ್ಟು ಬಜೆಟ್: 3954.25 ಕೋಟಿ ರೂ

ಖರೀದಿ ಮೇಲಿನ ರಿಯಾಯಿತಿ: 1236.25 ಕೋಟಿ ರೂ

ಹಳೆಯ ವಾಹನಗಳನ್ನು ಸ್ಕ್ರ್ಯಾಪ್ ಮಾಡಲು: 1718 ಕೋಟಿ ರೂ

ಚಾರ್ಜಿಂಗ್ ರಚನೆ: 1000 ಕೋಟಿ ರೂ

ಹೊಸ ನೀತಿಯ ಆರಂಭಿಕ ವರ್ಷಗಳಲ್ಲಿ ಮೊದಲು ಬಂದವರಿಗೆ ಆದ್ಯತೆ ಎಂಬ ಆಧಾರದ ಮೇಲೆ ಹೆಚ್ಚಿನ ಪ್ರೋತ್ಸಾಹಕಗಳನ್ನು ನೀಡಲು ಸರ್ಕಾರ ನಿರ್ಧರಿಸಿದೆ.

ದ್ವಿಚಕ್ರ ವಾಹನಗಳು: 2.25 ಲಕ್ಷದವರೆಗಿನ ಬೆಲೆಯ ಇ–ಸ್ಕೂಟರ್‌ಗಳು ಅಥವಾ ಬೈಕ್‌ಗಳಿಗೆ ಮೊದಲ ವರ್ಷ ಪ್ರತಿ ಕಿಲೋವ್ಯಾಟ್ ಗಂಟೆಗೆ 10,000 ಸಬ್ಸಿಡಿ ಸಿಗುತ್ತದೆ. ಮುಂದಿನ ಎರಡು ವರ್ಷಗಳಲ್ಲಿ ಈ ಮೊತ್ತವನ್ನು ಕ್ರಮವಾಗಿ 20,000 ಮತ್ತು 10,000ಕ್ಕೆ ಇಳಿಸಲಾಗುತ್ತದೆ.

ತ್ರಿಚಕ್ರ ವಾಹನಗಳು ಮತ್ತು ಸರಕು ವಾಹನಗಳು: ಇ–ಆಟೋಗಳಿಗೆ ಮೊದಲ ವರ್ಷದಲ್ಲಿ 50,000 ವರೆಗೆ ಮತ್ತು ಇ–ಸರಕು ವಾಹನಗಳಿಗೆ 1,00,000 ವರೆಗೆ ನೇರ ಖರೀದಿ ಸಬ್ಸಿಡಿ ನೀಡಲಾಗುವುದು.

ಕಡ್ಡಾಯ ನೋಂದಣಿ: ತೈಲ ಚಾಲಿತ ತ್ರಿಚಕ್ರ ವಾಹನಗಳನ್ನು 2027 ರಿಂದ ಹಂತಹಂತವಾಗಿ ರದ್ದುಗೊಳಿಸಲಾಗುವುದು.

2027 ಜನವರಿ 1ರಿಂದ: ದೆಹಲಿಯಲ್ಲಿ ಹೊಸ ನೋಂದಣಿಗೆ ವಿದ್ಯುತ್ ತ್ರಿಚಕ್ರ ವಾಹನಗಳನ್ನು ಮಾತ್ರ ಅನುಮತಿಸಲಾಗುವುದು.

2028 ಏಪ್ರಿಲ್ 1ರಿಂದ: ದ್ವಿಚಕ್ರ ವಾಹನ ವಿಭಾಗದಲ್ಲಿ ಹೊಸ ನೋಂದಣಿಗೆ ವಿದ್ಯುತ್ ವಾಹನಗಳನ್ನು ಮಾತ್ರ ಅನುಮತಿಸಲಾಗುವುದು.

ಶಾಲಾ ಬಸ್‌ಗಳು: 2030 ರ ವೇಳೆಗೆ ದೆಹಲಿಯ ಶಾಲಾ ಬಸ್‌ಗಳಲ್ಲಿ 30ರಷ್ಟು ವಿದ್ಯುತ್ ಚಾಲಿತವಾಗಿರುವುದನ್ನು ಕಡ್ಡಾಯಗೊಳಿಸಲಾಗಿದೆ.

# ಈ ವರ್ಷದಿಂದಲೇ ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ನೀತಿ: ಎಲ್ಲ ಶಿಕ್ಷಕರಿಗೆ ಇಂಗ್ಲಿಷ್ ಟ್ರೈನಿಂಗ್

ಬೆಂಗಳೂರು: ಜಾಗತಿಕವಾಗಿ ಕರ್ನಾಟಕ ಇಂದಿನ ಸರ್ಕಾರಿ ಶಾಲಾ ಮಕ್ಕಳನ್ನು ಸಜ್ಜುಗೊಳಿಸಲು ರಾಜ್ಯ ಸರ್ಕಾರ ಸಜ್ಜಾಗಿದೆ. ಈ ಸಂಬಂಧ 2026–27 ನೇ ಸಾಲಿನಲ್ಲಿ ರಾಜ್ಯದ 15 ಜಿಲ್ಲೆಗಳ ಎಲ್ಲ ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ಮಾಧ್ಯಮ ನೀತಿ ಆರಂಭಿಸಲಾಗುತ್ತದೆ. ಎಲ್ಲ ಸರ್ಕಾರಿ ಶಾಲೆಗಳ ಪ್ರಾಥಮಿಕ ಶಾಲಾ ಶಿಕ್ಷಕರು ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ತರಗತಿ ನಡೆಸಲಿದ್ದಾರೆ.

ಇತ್ತೀಚೆಗೆ ಎಸ್‌ಎಸ್‌ಎಲ್‌ಸಿಯಲ್ಲಿ ಹಿಂದಿ ಭಾಷೆ ಅಂಕಗಳನ್ನು ಕೈ ಬಿಟ್ಟ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಲಾಗಿತ್ತು. ಮಕ್ಕಳ ಹಿತ ದೃಷ್ಟಿಯಿಂದ ದ್ವಿಭಾಷಾ ನೀತಿ ಜಾರಿ ಕುರಿತು







ಹೇಳಿದ್ದ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವದ್ದು ಏಕಪಕ್ಷೀಯ ನಿರ್ಧಾರವೆಂಬ ಟೀಕೆಗಳು ಕೇಳಿ ಬಂದಿದ್ದವು.

ಇದರ ನಡುವೆ ಸರ್ಕಾರ ಪ್ರಸ್ತಕ ಶೈಕ್ಷಣಿಕ ವರ್ಷದಿಂದಲೇ ಹದಿನೈದು ಸರ್ಕಾರಿ ಶಾಲೆಗಳಲ್ಲಿ ದ್ವಿಭಾಷಾ ನೀತಿ ಆರಂಭಿಸಲು ಶಿಕ್ಷಣ ಇಲಾಖೆ ಪ್ಲ್ಯಾನ್ ಮಾಡಿಕೊಂಡಿದೆ. ಈ ಸಂಬಂಧ ಸರ್ಕಾರಿ ಪ್ರಾಥಮಿಕ ಶಿಕ್ಷಕರಿಗೆ ಇಂಗ್ಲಿಷ್ ತರಬೇತಿ ನೀಡುತ್ತಿದೆ.

ದ್ವಿಭಾಷಾ ಮಾಧ್ಯಮ ಪ್ರಯುಕ್ತ 2026–27ನೇ ಶೈಕ್ಷಣಿಕ ವರ್ಷ ಆರಂಭಕ್ಕೂ ಮುನ್ನ ಉದ್ದೇಶಿತ ಸರ್ಕಾರಿ ಶಾಲೆಗಳಲ್ಲಿ ಬೋಧಿಸುತ್ತಿರುವ 1,55, 950 ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲಿಷ್ ಮೀಡಿಯಂ ಟೀಚರ್ಸ್ ಟ್ರೈನಿಂಗ್ (EMTT) ಅನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ವತಿಯಿಂದ ನೀಡಲಾಗುತ್ತಿದೆ.

ರಾಜ್ಯದ ಎಲ್ಲ ಡಯಟ್‌ಗಳಲ್ಲಿ ಈ ತರಬೇತಿ ನಡೆಯುತ್ತಿದೆ.

3 ಹಂತಗಳಲ್ಲಿ ಶಿಕ್ಷಕರಿಗೆ ತರಬೇತಿ ಮಕ್ಕಳಿಗೆ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಇಂಗ್ಲಿಷ್ ನಲ್ಲಿ ಪಾಠ ಮಾಡುವುದನ್ನು ಹೇಳಿಕೊಡಲು ಅವರಿಗೆ ಇಂಗ್ಲಿಷ್ ತರಬೇತಿ ನೀಡಲಾಗುತ್ತಿದೆ.

ನುರಿತ ಪರಿಣಿತರಿಂದ ಶಿಕ್ಷಕರಿಗೆ ಈಗಾಗಲೇ ತರಬೇತಿ ಆರಂಭಿಸಲಾಗಿದೆ. ಒಟ್ಟು ಮೂರು ಹಂತಗಳಲ್ಲಿ ತರಬೇತಿ ನೀಡಲಾಗುತ್ತಿದೆ.

ಮೊದಲಿಗೆ ಪ್ರತಿ ಜಿಲ್ಲೆಯಿಂದ ರಾಜ್ಯದ ಒಬ್ಬರು ಡಯಟ್ ನೂಡಲ್ ಅಧಿಕಾರಿಗಳಂತೆ ರಾಜ್ಯದ ಒಟ್ಟು 385 ಎಂಆರ್‌ಪಿಗಳಿಗೆ ಬೆಂಗಳೂರಿನ ಪ್ರತಿಷ್ಠಿತ ಪ್ರಾದೇಶಿಕ ಇಂಗ್ಲಿಷ್ ಸಂಸ್ಥೆ ದಕ್ಷಿಣ ಭಾರತ ಆರ್‌ಐಇಎಸ್‌ಐ ಅವರಿಂದ ತರಬೇತಿ ಕೊಡಿಸಲಾಗುತ್ತಿದೆ.

ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಇನ್ನು ಎರಡನೇ ಹಂತದಲ್ಲಿ ರಾಜ್ಯ ಸಂಪನ್ಮೂಲ ವ್ಯಕ್ತಿಗಳಂತೆ ಪ್ರತಿ ತಾಲೂಕುಗಳಿಂದ ತಲಾ 15 ಸಂಪನ್ಮೂಲ ವ್ಯಕ್ತಿಗಳಿಂದ ಒಟ್ಟು ರಾಜ್ಯದ 3060 ಎಂಆರ್‌ಪಿಗಳಿಗೆ ಜಿಲ್ಲಾ ಹಂತದಲ್ಲಿ ತರಬೇತಿ ಕೊಡಿಸುವ ಕಾರ್ಯಕ್ರಮ ಚಾಲ್ತಿಯಲ್ಲಿದೆ.

ಮೂರನೇ ಹಂತದಲ್ಲಿ ದ್ವಿಭಾಷಾ ಮಾಧ್ಯಮ ಜಾರಿಗೆ ತರುವ ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತಿದೆ. ಈ ಮೂಲಕ ಇಂಗ್ಲಿಷ್ ಮಾಧ್ಯಮದಲ್ಲಿಯೂ ಬೋಧಿಸಲು ಸರ್ಕಾರಿ ಶಾಲಾ ಶಿಕ್ಷಕರು ಸಜ್ಜಾಗುತ್ತಿದ್ದಾರೆ.

ಇದು ಮಕ್ಕಳ ಭವ್ಯ ಭವಿಷ್ಯ ಹಾಗೂ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳ ಸುಧಾರಣೆಗೆ, ಶಿಕ್ಷಣ ವ್ಯವಸ್ಥೆಯಲ್ಲಿನ ಮಹತ್ತರ ಬದಲಾವಣೆಗೆ ಕಾರಣವಾಗಲಿದೆ ಎಂದು ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

# ಕೊನೆ ಹಂತದ ಲೋಡ್ ಟೆಸ್ಟಿಂಗ್: 5 ದಿನಗಳ ಕಾಲ ಪೀಣ್ಯ ಫ್ಲೈ ಓವರ್ ಬಂದ್, ಪ್ರಯಾಣಿಕರಿಗೆ ಪರ್ಯಾಯ ಮಾರ್ಗ

ಬೆಂಗಳೂರು: ತುಮಕೂರು ರಸ್ತೆಯ ಪೀಣ್ಯ ಎಲಿವೇಟೆಡ್ ಫ್ಲೈಓವರ್‌ನ (Peenya Elevated Flyover) ಕೇಬಲ್ ದುರಸ್ತಿ ಕಾರ್ಯ ಯಶಸ್ವಿಯಾಗಿ ಮುಕ್ತಾಯಗೊಂಡಿದ್ದು, ಈಗ ಅಂತಿಮ ಹಂತದ ಲೋಡ್ ಟೆಸ್ಟಿಂಗ್ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಮೇಲ್ಸೇತುವೆಯನ್ನು ಏಪ್ರಿಲ್ 13ರಿಂದ ಐದು ದಿನಗಳ ಕಾಲ ಸಂಪೂರ್ಣವಾಗಿ ಬಂದ್ ಮಾಡಲಾಗುವುದು ಎಂದು ಪೀಣ್ಯ ಸಂಚಾರಿ ಪೊಲೀಸರು ತಿಳಿಸಿದ್ದಾರೆ.

**ಪೀಣ್ಯ ಫ್ಲೈಓವರ್ ಬಂದ್ ಆಗುವ ಅವಧಿ**

ಏಪ್ರಿಲ್ 13ರ ಬೆಳಗ್ಗೆ 5 ಗಂಟೆಯಿಂದ ಆರಂಭಗೊಂಡು, ಏಪ್ರಿಲ್ 17ರ ಬೆಳಗ್ಗೆ 11 ಗಂಟೆಯವರೆಗೆ ಫ್ಲೈಓವರ್ ಮೇಲೆ ಯಾವುದೇ ವಾಹನ ಸಂಚಾರಕ್ಕೆ ಅವಕಾಶವಿರುವುದಿಲ್ಲ.

ಪೀಣ್ಯ ಫ್ಲೈಓವರ್ ಬಂದ್: ಪರ್ಯಾಯ ಮಾರ್ಗಗಳು

ವಾಹನ ಸವಾರರಿಗೆ ತೊಂದರೆಯಾಗದಂತೆ ಪೊಲೀಸರು ಬದಲಿ ಮಾರ್ಗಗಳನ್ನು ಸೂಚಿಸಿದ್ದಾರೆ. ಅವುಗಳು ಹೀಗಿವೆ; ನೆಲಮಂಗಲದಿಂದ ಬೆಂಗಳೂರು ಕಡೆಗೆ ಬರುವ ವಾಹನಗಳು ಕೆನ್ನಮೆಟಲ್ ವಿಡಿಯಾ ಹತ್ತಿರ ಫ್ಲೈಓವರ್ ಕೆಳಭಾಗದ ಎನ್‌ಹೆಚ್–4 ಮತ್ತು ಸರ್ವಿಸ್ ರಸ್ತೆ ಮೂಲಕ 8ನೇ ಮೈಲಿ, ದಾಸರಹಳ್ಳಿ, ಜಾಲಹಳ್ಳಿ ಕ್ರಾಸ್, ಪೀಣ್ಯ ಪೊಲೀಸ್ ಠಾಣೆ ಜಂಕ್ಷನ್, ಎಸ್‌ಆರ್‌ಎಸ್



(SRS) ಜಂಕ್ಷನ್ ಮತ್ತು ಗೊರಗುಂಟೆಪಾಳ್ಯ ಮೂಲಕ ಸಂಚರಿಸಬಹುದಾಗಿದೆ.

ಸಿಎಂಟಿಐನಿಂದ ನೆಲಮಂಗಲ ಕಡೆಗೆ ಹೋಗುವ ವಾಹನಗಳು ಫ್ಲೈಓವರ್ ಕೆಳಭಾಗದ ಎನ್‌ಹೆಚ್–4 ಮತ್ತು ಸರ್ವಿಸ್ ರಸ್ತೆ ಮೂಲಕ ಎಸ್‌ಆರ್‌ಎಸ್ ಜಂಕ್ಷನ್, ಪೀಣ್ಯ ಠಾಣೆ ಜಂಕ್ಷನ್, ಜಾಲಹಳ್ಳಿ ಕ್ರಾಸ್, ದಾಸರಹಳ್ಳಿ, 8ನೇ ಮೈಲಿ ಮತ್ತು ಪಾರ್ಲೆ ಜಿ ಟೋಲ್ ಮೂಲಕ ಸಾಗಬಹುದಾಗಿದೆ.

# ಡೂನ್ ಲಿಟ್ ಫೆಸ್ಟ್ 2026: ಸಾಹಿತಿ – ಚಿಂತಕರ ಸಮಾಗಮ; ಸಾಹಿತ್ಯ, ಸಿನಿಮಾ, ಇತಿಹಾಸ, AI ಚರ್ಚೆಗಳಿಗೆ ಸಾಕ್ಷಿ

ಉತ್ತರಾಖಂಡನಲ್ಲಿ ಶಿಕ್ಷಣ ಸಚಿವಾಲಯದ ಅಧಿನದ ಭಾರತದ ರಾಷ್ಟ್ರೀಯ ಪುಸ್ತಕ ಟ್ರಸ್ಟ್ 'ಡೂನ್ ಪುಸ್ತಕ ಉತ್ಸವ 2026' ಆಯೋಜಿಸಿತ್ತು.

ಇದು ಸ್ಥಳೀಯ ಭಾಷೆಗಳಿಗೆ ಆದ್ಯತೆ ನೀಡುವ ಜೊತೆಗೆ ವೈವಿಧ್ಯಮಯ ವಿಷಯಗಳ ಕುರಿತು ವಿಚಾರ ವಿನಿಮಯಕ್ಕೆ ಬಹುಮುಖ್ಯ ವೇದಿಕೆ ಆಯಿತು.

ಕ್ರಿಯಾತ್ಮಕ ಡೂನ್ ಲಿಟ್ ಫೆಸ್ಟ್ ಸಹ ನಡೆದಿದ್ದು, ಸಾಹಿತ್ಯಾಸಕ್ತರು, ಓದುಗರು, ಚಿಂತಕರು ಮತ್ತು ಕಥೆಗಾರರನ್ನು ಒಟ್ಟುಗೂಡಿಸಿದೆ.

ಸಾಹಿತ್ಯ, ಸಿನಿಮಾ, ಇತಿಹಾಸ, ಆಧ್ಯಾತ್ಮಿಕತೆ, ರಕ್ಷಣೆ, ವಿಜ್ಞಾನ ಮತ್ತು ತಂತ್ರಜ್ಞಾನದ ಕುರಿತು ಅಧಿವೇಶನಗಳ ಮೂಲಕ ಪ್ರೇಕ್ಷಕರ ಈ ಉತ್ಸವದಲ್ಲಿ ಪಾಲ್ಗೊಂಡಿದ್ದು, ವಿಶೇಷವಾಗಿತ್ತು.

ಉತ್ಸವದಲ್ಲಿ ಲಿಟ್ ಫೆಸ್ಟ್ ವಿಷಯಗಳ ಕುರಿತು ಸಾಕಷ್ಟು ಚರ್ಚೆಗಳು ಆಗುತ್ತಿದ್ದವು. ಸಮಾರಂಭದಲ್ಲಿ ಮೊದಲ ದಿನ ತನಿಖಾ ಪತ್ರಕರ್ತ ಜುಪಿಂದರ್ ಸಿಂಗ್ ಅವರು ಭಗತ್ ಸಿಂಗ್ ಅವರ ಕಳೆದು ಹೋದ ಪಿಸ್ತೂಲ್ ಆವಿಷ್ಕಾರ ಬಗೆಗಿನ ಒಂದಷ್ಟು ಸಂಗತಿಗಳನ್ನು ಬಿಚ್ಚಿಟ್ಟರು. ಇನ್ನು ಲೇಖಕಿ ಮತ್ತು ಚಿತ್ರಕಥೆಗಾರ್ತಿ ಅದ್ವೈತ ಕಲಾ ಅವರು "ಬಿಟ್ವೀನ್ ದಿ ಲೈನ್ಸ್ ಅಂಡ್ ಲೆನ್ಸ್: ಸ್ಟೋರೀಸ್ ಆಫ್ ಇಂಡಿಪೆಂ ಡೆಂಟ್ ಇಂಡಿಯಾ" ಎಂಬ ತಮ್ಮ ಸ್ವತಂತ್ರ ಮಹಿಳೆ ಕುರಿತಾದ ವಿಕಸನ ಪರಿಕಲ್ಪನೆ, ಅನ್ವೇಷಣೆ ಮತ್ತು ಕಾದಂಬ ರಿಗಳು, ಸಿನಿಮಾ ಹಾಗೂ ಟಿವಿಯಲ್ಲಿನ ತಮ್ಮ ಕೆಲಸ ಗಳ ಅನುಭವ ವಿವರಿಸಿ ದರು.

ಉತ್ಸವದ ಎರಡನೇ ದಿನವು ಪ್ರಮುಖ ಕಾರ್ಯ ಕ್ರಮಗಳಿಗೆ ಜನ ಸಾಕ್ಷಿ ಯಾದರು. ವಕೀಲ ಮತ್ತು ಲೇಖಕ ಬ್ರಿಜೇಶ್ ದೇಸಾ ಯಿ ತಾವೇ ಬರೆದ "ಮೋದಿಯ ಮಿಷನ್" ಕೃತಿ ಕುರಿತು ಹಂಚಿಕೊಂಡರು.

ದೇಶದ ಪ್ರಧಾನಿ ನರೇಂದ್ರ ಮೋದಿಯವರ ಆರಂಭಿಕ ಜೀವನ, ಶಿಕ್ಷಣ ಮತ್ತು ನಾಯಕತ್ವ ಗುಣವನ್ನು ಈ ಪುಸ್ತಕದಲ್ಲಿ ವಿವರಿಸಲಾಗಿದೆ.

ಕಾದಂಬರಿಕಾರ ಕುಲಪ್ರೀತ್ ಯಾದವ್ 1857 ರ ಸ್ವಾತಂತ್ರ್ಯ ದಂಗೆಯ ಕಥೆಗಳನ್ನು, ರಾವ್ ತುಲಾ ರಾಮ್ ಅವರ ಧೈರ್ಯ ಪ್ರಸ್ತಾಪಿಸಿದರು. ಸತ್ಯ, ಸಂಬಂಧಗಳು ಮತ್ತು ಸಾರ್ಥಕ ಜೀವನದ ಅರ್ಥದ ಕುರಿತು ಪ್ರೇಕ್ಷಕರೊಂದಿಗೆ ಅತಿಥಿಗಳು ಚರ್ಚಿಸಿದರು.

ಇನ್ನು ಮೂರನೇ ದಿವಸವು ಉತ್ತಮ




ಕಾರ್ಯಕ್ರಮಗಳು ನಡೆದಿದ್ದು, ಸಿನಿಮಾ ನಿರ್ಮಾಪಕ ಇಮ್ತಿಯಾಜ್ ಅಲಿ ಅವರು ಫಿಲ್ಮ್ ಹಾಗೂ ಕಥೆ ಹೇಳುವಿಕೆಯ ಬಗೆಗಿನ ಒಂದಷ್ಟು ಅಂಶಗಳನ್ನು ಬಿಚ್ಚಿಟ್ಟರು.

ಚಲನಚಿತ್ರಗಳ ಮೇಲೆ ಅವರು ಆಕರ್ಷಿತಗೊಂಡಿದ್ದು, ಕಾಶ್ಮೀರದಲ್ಲಿ "ರಾಕ್‌ಸ್ಟಾರ್" ಚಿತ್ರೀಕರಣದ ಅನುಭವ, ರಂಗಭೂಮಿ ಪ್ರೇಕ್ಷಕರಲ್ಲಿನ ಆದ್ಯತೆಗಳ ಕುರಿತು ಮಾಹಿತಿ ಹಂಚಿಕೊಂಡರು.

ಈ ಬಾರಿಯು ಉತ್ಸವವು ಪ್ರಾದೇಶಿಕ ಸಾಹಿತ್ಯ ಸಂಪ್ರದಾಯಗಳ ಮೇಲೆ ಕೇಂದ್ರೀಕರಿಸಿದೆ. ಸ್ಥಳೀಯ ಭಾಷೆಗಳಲ್ಲಿ 26ಕೃತಿಗಳನ್ನು ಬಿಡುಗಡೆ ಮಾಡಲಾಗಿದೆ.

ಕವಿಗಳಾದ ರುಚಿ ಬಹುಗುಣ ಉನಿಯಾಲ್, ಅರ್ಚನಾ ಝಾ ಮತ್ತು ಬುದ್ಧಿನಾಥ್ ಮಿಶ್ರಾ ಅವರನ್ನು ಒಳಗೊಂಡ ವಿಶೇಷ ಸಾಹಿತ್ಯಿಕ ಅಧಿವೇಶನ ನಡೆಯಿತು. ಉತ್ತರಾಖಂಡದ ಶ್ರೀಮಂತ ಕಾವ್ಯ ಪರಂಪರೆಯನ್ನು ಸಾರಲಾಯಿತು.

ಕುಮಾವೋನಿ ಮತ್ತು ಗರ್ಹ್ವಾಲಿಯಲ್ಲಿ ಅನುವಾದಿತ ಕೃತಿಗಳ ಕುರಿತಾದ ಮತ್ತೊಂದು ಅಧಿವೇಶನದಲ್ಲಿ ಕಮಲಾ ಪಂತ್, ಚಂದ್ರಶೇಖರ್ ತಿವಾರಿ, ಶಶಿಭೂಷಣ್ ಬಡೋನಿ, ಬೀನಾ ಬಂಚ್ವಾಲ್, ನೀತಾ ಕುಕ್ರೇತಿ ಮತ್ತು ರಾಮಕಾಂತ್ ಬಂಚ್ವಾಲ್ ಸೇರಿದಂತೆ ಭಾಷಣಕಾರರು ಪ್ರಾದೇಶಿಕ ಭಾಷೆ, ಅನುವಾದಗಳ ಸಾಂಸ್ಕೃತಿಕ ಪ್ರಾಮುಖ್ಯತೆ ಹಾಗೂ ಇಂದಿನ ಸವಾಲುಗಳನ್ನು ಚರ್ಚಿಸಿ ದರು.

'ಲಿಟ್ ಫೆಸ್ಟ್' ನಲ್ಲಿ ಗಗನಯಾತ್ರಿ ಮತ್ತು ಭಾರತೀಯ ವಾಯುಪಡೆಯ ಯುದ್ಧ ವಿಮಾನ ಪೈಲಟ್ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ, ರಾಷ್ಟ್ರೀಯ ಪುಸ್ತಕ ಟ್ರಸ್ಟ್‌ನ ನಿರ್ದೇಶಕ ಯುವರಾಜ್ ಮಲಿಕ್ ಅವರೊಂದಿಗೆ ಸಂವಾದ ನಡೆಯಿತು. ಬಾಹ್ಯಾಕಾಶ ಪ್ರಯಾಣ ಬಿಚ್ಚಿಡಲಾಯಿತು.

ಸಾಹಿತ್ಯದ ಮೂಲಕ ಇತಿಹಾಸ" ಮತ್ತು "ದೇಶಭಕ್ತಿ ಮತ್ತು ಕ್ರಾಂತಿ: ಭಾರತದ ಹಿಂದಿನ ಕಥೆಗಳು" ಮುಂತಾದ ವಿಷಯಗಳ ಕುರಿತು ಪ್ರಮುಖ ಚರ್ಚೆಗಳಾದವು.

ನಿತಿನ್ ಸೇಠ್ ಅವರ "ಸ್ಮಾರ್ಟರ್ ಮೆಷಿನ್ಸ್, ವೈಸರ್ ಹ್ಯೂಮನ್ಸ್" ಎಂಬ ಅಧಿವೇಶನದಲ್ಲಿ ಮನುಷ್ಯ ಮತ್ತು AI ವಿಕಸ ಬಗ್ಗೆ ಮಹತ್ವದ ಚರ್ಚೆಗಳು ನಡೆದವು.

# ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೊಲೆ; ಏಪ್ರಿಲ್ 24ಕ್ಕೆ ಇತ್ತು ಮದುವೆ

ಧಾರವಾಡ : ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯನ್ನು ಅವರ ಮನೆಯಲ್ಲಿ ಕೊಲೆ ಮಾಡಿರುವ ಘಟನೆ ನಗರದ ಹಾಶ್ಮಿನಗರದಲ್ಲಿ ನಡೆದಿದ್ದು, ಕೊಲೆ ಆರೋಪಿಗಳ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿದೆ. ಫೈರೋಜ್ ಪಠಾಣ್ ಕೊಲೆಯಾದ ಯುವಕ. ಅವರಿರುವ ಮನೆಯಲ್ಲಿ ಕೊಲೆ ಮಾಡಲಾಗಿದೆ. ಹತ್ಯೆಗೆ ನಿಖರವಾದ ಮಾಹಿತಿ ಲಭ್ಯವಾಗಿಲ್ಲ. ಸ್ಥಳಕ್ಕೆ ಉಪನಗರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಇದೊಂದು ರಾಜಕೀಯ ಪ್ರೇರಿತವಾದ ಹತ್ಯೆ ಎಂದು ಫೈರೋಜ್ ಮನೆಯವರು ಆರೋಪಿಸಿದ್ದಾರೆ. ಮೃತ ಫೈರೋಜ್ ರಾಜಕೀಯವಾಗಿ ಬೆಳೆದಿದ್ದರು. ಇದೇ ತಿಂಗಳು



24 ರಂದು ಮದುವೆ ಸಹ ನಿಶ್ಚಯವಾಗಿತ್ತು. ಫೈರೋಜ್ ಪಠಾಣ್ ಮದುವೆಯ ತಯಾರಿಯಲ್ಲಿ ಬ್ಯುಸಿಯಾಗಿದ್ದರು.

**ಸ್ಥಳೀಯ ವ್ಯಕ್ತಿಗಳಿಂದ ಹತ್ಯೆ ಆರೋಪ :** ಫೈರೋಜ್ ಮನೆಗೆ ತೆರಳಿ ರೂಮ್‌ನ ಬಾಗಿಲು ಹಾಕಿಕೊಂಡಿದ್ದರೂ ಸಹ ಬಾಗಿಲು ಮುರಿದು ನಾಲ್ಕು ಆರೋಪಿಗಳು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ, ಕೊಲೆ ಮಾಡಿದ್ದಾರೆ. ಸ್ಥಳೀಯ ವ್ಯಕ್ತಿಗಳೇ ಹತ್ಯೆ ಮಾಡಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಸ್ಥಳದಲ್ಲಿ ನಡೆದ ಘಟನೆಯ ದೃಶ್ಯಾವಳಿ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿವೆ. ಇದನ್ನು ಆಧರಿಸಿ ಪೊಲೀಸರು ಆರೋಪಿಗಳಿಗೆ ಬಲೆ ಬೀಸಿದ್ದಾರೆ. ಸದ್ಯ ಸ್ಥಳಕ್ಕೆ ಹು–ಧಾ ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಕಮಿಷನರ್ ಶಶಿಕುಮಾರ್ ಪ್ರತಿಕ್ರಿಯೆ : ಈ ಕುರಿತು ಹು–ಧಾ ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಮಾತನಾಡಿದ್ದು, 'ಫೈರೋಜ್ ಪಠಾಣ್ ಅವರು ಮನೆಯಲ್ಲಿದ್ದ ಸಂದರ್ಭದಲ್ಲಿ 9:30 ರಿಂದ 10 ಗಂಟೆ ನಡುವೆ ಮೂರರಿಂದ ನಾಲ್ಕು ಜನ ಬಂದು ಇವರಿಗೆ ಹಲ್ಲೆ ಮಾಡಿದ್ದಾರೆ. ಹೀಗಾಗಿ, ತೀವ್ರ ರಕ್ತಸ್ರಾವ ಆಗಿ ಮೃತಪಟ್ಟಿದ್ದಾರೆ ಎಂದು ನನಗೆ ತಿಳಿದುಬಂದಿದೆ. ಯಾವ ಕಾರಣಕ್ಕೆ ಮಾಡಿದ್ದಾರೆ ಹಾಗೂ ಯಾರು ಮಾಡಿದ್ದಾರೆ ಎಂಬುದನ್ನು ನೋಡಿರುವ ಪ್ರತ್ಯಕ್ಷದರ್ಶಿಗಳು ಹಾಗೂ ಅವರ ಕುಟುಂಬ ಸದಸ್ಯರು ಇದ್ದಾರೆ. ಆರೋಪಿಗಳು ಯಾರು ಎಂಬ ಸುಳಿವು ಸಿಕ್ಕಿರುವ ಹಿನ್ನೆಲೆ ನಮ್ಮ ಸಿಬ್ಬಂದಿ ಆ ಸಂಬಂಧ ಕಾರ್ಯೋನ್ಮುಖರಾಗಿದ್ದಾರೆ. ಆದಷ್ಟು ಬೇಗ ಆರೋಪಿಗಳನ್ನು ಬಂಧಿಸುತ್ತೇವೆ ಮತ್ತು ಕೊಲೆಗೆ ಕಾರಣ ಏನೆಂಬುದನ್ನು ಬಾಯಿ ಬಿಡಿಸುತ್ತೇವೆ ಎಂದು ತಿಳಿಸಿದರು.

ಈ ಕುರಿತು ಮೃತನ ತಾಯಿ ಮಾತನಾಡಿದ್ದು, 'ಮಗ ಮನೆಯ ಹೊರಗಡೆ ಇದ್ದ. ನಾಲ್ಕೈದು ಹುಡುಗರು ಬಂದಿದ್ದರು. ಮಗನ ಪಕ್ಕದಲ್ಲಿದ್ದವನು ಅವನಿಗೆ ಚಾಕುವಿನಿಂದ ಚುಚ್ಚಿದ. ಆಗ ನನ್ನ ಮಗ ಮನೆಯೊಳಗೆ ಓಡಿ ಹೋಗಿ ಬಾಗಿಲು ಹಾಕಿಕೊಂಡ. ಆ ಬಾಗಿಲನ್ನು ಮುರಿದು ಅವನಿಗೆ ಹೊಡೆದಿದ್ದಾರೆ. ಹಲ್ಲೆ ನಡೆಸಿದವರು ಅವನ ಸ್ನೇಹಿತರೇ ಆಗಿದ್ದು, ನಮಗೂ ಹೊಡೆದರು ಎಂದು ಹೇಳಿದ್ದಾರೆ.

# ಸಮುದ್ರ ಮಲ್ಟ್ರೈ ಸುಳಿಗಾಳಿ, ಏಪ್ರಿಲ್ 14–17ರವರೆಗೆ ಬೆಂಗಳೂರು, ಇತರ ಜಿಲ್ಲೆಗಳಲ್ಲಿ ಮಳೆ

ಬೆಂಗಳೂರು: ಸಮುದ್ರ ಮೇಲ್ಮೈನಲ್ಲಿ ಸೃಷ್ಟಿಯಾಗಿರುವ ವಾಯು ಸುಳಿಗಾಳಿ ಮತ್ತು ಟ್ರಫ್ ತೀವ್ರತೆಯ ಪರಿಣಾಮವಾಗಿ ರಾಜಧಾನಿ ಬೆಂಗಳೂರಿನ ಕೆಲವೆಡೆ ಶುಕ್ರವಾರ ಸಂಜೆಯಿಂದ ಮಳೆ ಆಗಿದೆ. ಈ ಮಳೆ ಶನಿವಾರವು (ಏಪ್ರಿಲ್ 11) ಮುಂದುವರಿಯಲಿದೆ.

ಈಗಾಗಲೇ ರಾಜ್ಯದ ಹಲವೆಡೆ ಆಗಾಗ ಪೂರ್ವ ಮುಂಗಾರು ಮಳೆ ಆಗುತ್ತಿದ್ದು, ಒಣಹವೆಗೆ ಕಾವೇರಿದ್ದ ಇಳೆಗೆ ಮಳೆಯ ಸಿಂಚನದಿಂದ ತಂಪಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಳೆ ಎಚ್ಚರಿಕೆ ನೀಡಲಾಗಿದೆ. ಮುಂದಿನ ಒಂದು ವಾರವು ರಾಜ್ಯದಲ್ಲಿ ಎಲ್ಲೆಲ್ಲಿ ಮಳೆ ಆಗಲಿದೆ, ಎಲ್ಲಿ ಅತ್ಯಧಿಕ ತಾಪಮಾನ ಕಂಡು ಬರಲಿದೆ ಎಂಬ ಮಾಹಿತಿಯನ್ನು ಹವಾಮಾನ ಇಲಾಖೆ ವರದಿ ಆಧರಿಸಿ ನೀಡಿದ ಈ ಲೇಖನದಲ್ಲಿ ತಿಳಿಯಿರಿ.

ಹವಾಮಾನ ಇಲಾಖೆಯ ಪ್ರಕಾರ, ಶನಿವಾರ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮಜರಾನಗರ, ಮಂಡ್ಯ, ಮೈಸೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆ ಆಗಲಿದೆ. ಹಿಂಗಾರು ಬೆಳೆ ಪಡೆದು ಮುಂಗಾರು ಬಿತ್ತನೆಗೆ ಜಮೀನು ಹದ ಮಾಡುವ ರೈತರಿಗೆ ಈ ಮಳೆಯಿಂದ ಅನುಕೂಲವಾಗಲಿದೆ. ಮಳೆಗೆ ಭೂಮಿ ಕೊಂಚ ಮೆತ್ತಗಾಗುವ ಪರಿಣಾಮ ರಂಟೆ ಹೊಡೆಸಲು ಸಹಕಾರಿ. ಮುಂಗಾರು ಬಿತ್ತನೆಗೆ ಸಜ್ಜುಗೊಳಿಸಲು ಪೂರ್ವ ತಯಾರಿ ಮಾಡಿಕೊಳ್ಳಬಹುದಾಗಿದೆ.

ಏಪ್ರಿಲ್ 12, 13ರಂದು ಒಳನಾಡು ಜಿಲ್ಲೆಗಳ ವಿವಿಧ ಪ್ರದೇಶಗಳಲ್ಲಿ ಮತ್ತು ಕರಾವಳಿ ಭಾಗದ ಒಂದೆರಡು ಕಡೆ ಮಾತ್ರ ಮಳೆ ಆಗಲಿದ್ದು, ಉಳಿದಂತೆ ಉಡುಪಿ, ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಅತ್ಯಧಿಕ ತಾಪಮಾನ ಕಂಡು ಬರಲಿದೆ. ಈಗಾಗಲೇ ಈ ಭಾಗದಲ್ಲಿ 35 ಡಿಗ್ರಿ ಅಸುಪಾಸು ಗರಿಷ್ಠ ತಾಪಮಾನ ದಾಖಲಾಗಿದೆ. ಇದು ಇನ್ನೂ ಹೆಚ್ಚಾಗುವ ಲಕ್ಷಣಗಳು ಇವೆ ಎಂದು ಹವಾಮಾನ ತಜ್ಞರು ಮುನ್ಸೂಚನೆ ನೀಡಿದ್ದಾರೆ.

ಏಪ್ರಿಲ್ 14ರಿಂದ ಹೆಚ್ಚಿನ ಪ್ರದೇಶಗಳಲ್ಲಿ ಮಳೆ ಏಪ್ರಿಲ್ 14ರಿಂದ 17ರವರೆಗೆ ಪೂರ್ವ




ಮುಂಗಾರು ಮಳೆ ಅಬ್ಬರ ಕರಾವಳಿ ಪ್ರದೇಶ ಒಳಗೊಂಡಂತೆ ದಕ್ಷಿಣ ಒಳನಾಡಿನ ಅನೇಕ ಕಡೆಗಳಲ್ಲಿ ಉತ್ತಮ ಮಳೆ ನಿರೀಕ್ಷೆ ಇದೆ. ಕಲ್ಯಾಣ ಕರ್ನಾಟಕದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಒಣಹವೆ ಮುಂದುವರಿಯಲಿದೆ. ಇತ್ತ ಉತ್ತರ ಒಳನಾಡಿನ ಬೆಳಗಾವಿ, ಬೀದರ್, ಧಾರವಾಡ, ಗದಗ, ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ಶಿವಮೊಗ್ಗದ ವಿವಿಧ ಪ್ರದೇಶಗಳಲ್ಲಿ ಗುಡುಗು, ಮಿಂಚು ಸಹಿತ ವರುಣಾರ್ಭಟ ಕಂಡು ಬರಬಹುದು.

ತೀವ್ರ ಬಿಸಿಲಿನಿಂದ ಕೂಡಿದ ಉಡುಪಿ, ಉತ್ತರ ಕನ್ನಡ ಹಾಗೂ ದಕ್ಷಿಣ ಭಾಗಗಳಲ್ಲೂ ಈ ಮೂರು ತಾಪಮಾನ ಕುಸಿಯಲಿದ್ದು, ಅಲ್ಲಿ ಸಹ ಮಳೆ, ತಂಪು ವಾತಾವರಣ ಕಂಡು ಬರುವ ನಿರೀಕ್ಷೆಗಳು ಇವೆ ಎಂದು ಭಾರತೀಯ ಹವಾಮಾನ ಇಲಾಖೆ ಬೆಂಗಳೂರು ಹವಾಮಾನ ಕೇಂದ್ರವು ಎಚ್ಚರಿಕೆ ನೀಡಿದೆ.

ಬೆಂಗಳೂರಿನ ಹವಾಮಾನ ಮುನ್ಸೂಚನೆ ಶನಿವಾರ ಮತ್ತು ಭಾನುವಾರ ಸೇರಿ ಮುಂದಿನ 48 ಗಂಟೆಗಳ ಕಾಲ ನಗರದಲ್ಲಿ ಮೋಡ ಕವಿದ ವಾತಾವರಣ ಕಂಡು ಬರಲಿದೆ. ಶುಕ್ರವಾರ ಸಂಜೆ ಸೇರಿದಂತೆ ಅನೇಕ ಪ್ರದೇಶಗಳಲ್ಲಿ ಹಗುರದಿಂದ ಸಾಧಾರಣವಾಗಿ ಮಳೆ ಬರಲಿದೆ. ಭಾಗಶಃ ಮೋಡ ಕವಿದ ಸ್ಥಿತಿ ಕಂಡು ಬರಲಿದ್ದು, ಸಂಜೆ ಇಲ್ಲವೇ ರಾತ್ರಿಯ ವೇಳೆಗೆ ಹಗುರ ಮಳೆ/ಗುಡುಗು ಸಹಿತ ಜೋರು ಮಳೆ ಆಗಲಿದೆ. ನಗರದ ಗರಿಷ್ಠ ತಾಪಮಾನ 34 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ 24 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಕಂಡು ಬರಬಹುದೆಂದು ಐಎಂಡಿ ತಿಳಿಸಿದೆ.

ಹವಾಮಾನ ವೈಪರೀತ್ಯ ಆಗಿದ್ದೆಲ್ಲಿ ಒಡಿಶಾ ರಾಜ್ಯದ ಒಳಭಾಗದಿಂದ ದಕ್ಷಿಣ ಛತ್ತೀಸ್‌ಗಢ, ತೆಲಂಗಾಣ, ರಾಯಲಸೀಮಾ, ತಮಿಳುನಾಡಿನ ಒಳಭಾಗದವರೆಗೆ ಸರಾಸರಿ ಸಮುದ್ರ ಮಟ್ಟದಿಂದ 0.9 ಕಿ.ಮೀ ಎತ್ತರದಲ್ಲಿ ಟ್ರಫ್ ನಿರ್ಮಾಣವಾಗಿದೆ. ಜೊತೆಗೆ ತಮಿಳುನಾಡಿನ ಉತ್ತರ ಭಾಗದ ಹಾಗೂ ನೆರೆಹೊರೆಗಳಲ್ಲಿ ಸರಾಸರಿ ಸಮುದ್ರ ಮಟ್ಟದಿಂದ 1.5 ಕಿಲೋ ಮೀಟರ್ ಎತ್ತರದಲ್ಲಿ ಸಾಗರದ ಮೇಲ್ಮೈನಲ್ಲಿ ವಾಯು ಸುಳಿಗಾಳಿ ಮುಂದುವರೆದಿದೆ. ಇವುಗಳ ತೀವ್ರತೆ ಕಾರಣದಿಂದ ಕರ್ನಾಟಕದ ನಾನಾ ಕಡೆಗಳಲ್ಲಿ ಆಗಾಗ ಮಳೆ ವಾತಾವರಣ ಕಂಡು ಬರುತ್ತಿದೆ ಎಂದು ಐಎಂಡಿ ವಿಜ್ಞಾನಿಗಳು ತಿಳಿಸಿದ್ದಾರೆ.

# ದಿ.ಪ್ರೊಫೆಷನಲ್ ಕೊರಿಯರ್ಸ್ ಎಕ್ಸ್‌ಪ್ರೆಸ್ ಲಾಜಿಸ್ಟಿಕ್ ಸಂಸ್ಥೆ ವತಿಯಿಂದ ಸಾರ್ವಜನಿಕರ ಉತ್ತಮ ಸೇವೆಗೆ ಪ್ರೊ.ಎಕ್ಸ್ ಬಿಡುಗಡೆ

ಬೆಂಗಳೂರು: ಜೆಪಿ ಫಾರ್ಚೂನ್ ಸೆಲೆಸ್ಟಿಯನ್ ಸಭಾಂಗಣದಲ್ಲಿ ಭಾರತದ ಅತ್ಯಂತ ವಿಶ್ವಾಸಾರ್ಹ ಮತ್ತು ವ್ಯಾಪಕವಾಗಿ ಗುರುತಿಸಲ್ಪಟ್ಟ ಲಾಜಿಸ್ಟಿಕ್ಸ್ ಬ್ರ್ಯಾಂಡ್ ಗಳಲ್ಲಿ ಒಂದಾದ ದಿ ಪ್ರೊಫೆಷನಲ್ ಕೊರಿಯರ್ಸ್ ಮತ್ತು ಕೊರಿಯರ್ ಮತ್ತು ಎಕ್ಸ್ ಪ್ರೆಸ್ ಲಾಜಿಸ್ಟಿಕ್ ಸಂಸ್ಥೆಯ ವತಿಯಿಂದ ಹೊಸ ಪ್ರಿಮಿಯಂ ಸೇವೆಯ ಪ್ರೊ ಎಕ್ಸ್ ಬಿಡುಗಡೆಯ ಕುರಿತು ಮಾಧ್ಯಮಗೋಷ್ಠಿ ವ್ಯವಸ್ಥಾಪಕ ನಿರ್ದೇಶಕರಾದ ಥಾಮಸ್ ಜಾನ್ , ಮ್ಯಾನೇಜಿಂಗ್ ಡೈರೆಕ್ಟರ್ ಅಹಮದ್ ಮೀರನ್, ನಿರ್ದೇಶಕರುಗಳಾದ ಡೆಮೇಸ್ಸಿ ಸಿ.ಚಾಕೋ, ಸುರೇಶ್ ಭಾರದಾನ್ ವಿ.ಶ್ರೀನಾಥ್, ಪಿ.ಎಂ.ಅಬ್ರಹಾಂ ಪ್ರೊ ಎಕ್ಸ್ ಬಿಡುಗಡೆಗೊಳಿಸಿದರು. ದಿ ಪ್ರೊಫೆಷನಲ್ ಕೊರಿಯರ್ಸ್ ಪ್ರೊ ಇಎಕ್ಸ್ – ಅಲ್ಟ್ರಾ ಪ್ರೀಮಿಯಂ, ಸಂಪೂರ್ಣವಾಗಿ ಡಿಜಿಟಲ್ ಎಕ್ಸ್‌ಪ್ರೆಸ್ ಸೇವೆಯನ್ನು ಪ್ರಾರಂಭಿಸಿದೆ ಭಾರತದ ಅತ್ಯಂತ ವಿಶ್ವಾಸಾರ್ಹ ಮತ್ತು ವ್ಯಾಪಕವಾಗಿ ಗುರುತಿಸಲ್ಪಟ್ಟ ಲಾಜಿಸ್ಟಿಕ್ಸ್ ಬ್ರ್ಯಾಂಡ್‌ಗಳಲ್ಲಿ ಒಂದಾದ ದಿ ಪ್ರೊಫೆಷನಲ್ ಕೊರಿಯರ್ಸ್ (ಟಿಪಿಸಿ), ಕೊರಿಯರ್ ಮತ್ತು ಎಕ್ಸ್‌ಪ್ರೆಸ್ ಲಾಜಿಸ್ಟಿಕ್ಸ್ ಉದ್ಯಮದಲ್ಲಿ 38 ವರ್ಷಗಳ ಶ್ರೇಷ್ಠತೆಯನ್ನು ಸೂಚಿಸುತ್ತದೆ.

ದೇಶದ ವಿಶಾಲ ವಿತರಣಾ ಜಾಲಗಳಲ್ಲಿ ಒಂದಾದ ಟಿಪಿಸಿ, ಭಾರತದ ಪ್ರತಿಯೊಂದು ಮೂಲೆ ಮೂಲೆಗಳಲ್ಲಿ ವ್ಯವಹಾರಗಳು ಮತ್ತು ವ್ಯಕ್ತಿಗಳನ್ನು ಯಶಸ್ವಿಯಾಗಿ ಸಂಪರ್ಕಿಸಿದೆ.

ರಾಷ್ಟ್ರದ ಅತಿದೊಡ್ಡ ಕೊರಿಯರ್ ಮತ್ತು ಎಕ್ಸ್‌ಪ್ರೆಸ್ ಲಾಜಿಸ್ಟಿಕ್ಸ್ ಸೇವಾ ಪೂರೈಕೆದಾರರಲ್ಲಿ ಒಂದಾಗಿ ತನ್ನನ್ನು ತಾನು ಸ್ಥಾಪಿಸಿಕೊಂಡಿದೆ. ವಿಶ್ವಾಸಾರ್ಹ, ಪರಿಣಾಮಕಾರಿ ಮತ್ತು ಗ್ರಾಹಕ–ಕೇಂದ್ರಿತ ವಿತರಣಾ ಪರಿಹಾರಗಳನ್ನು ಒದಗಿಸುವ ದೃಷ್ಟಿಕೋನದಿಂದ ಸ್ಥಾಪನೆಯಾದ ಟಿಪಿಸಿ, ಬದಲಾಗುತ್ತಿರುವ ಮಾರುಕಟ್ಟೆ ಅಗತ್ಯತೆಗಳು ಮತ್ತು ತಾಂತ್ರಿಕ ಪ್ರಗತಿಯೊಂದಿಗೆ ಸ್ಥಿರವಾಗಿ ವಿಕಸನಗೊಂಡಿದೆ.

ಸುಮಾರು ನಾಲ್ಕು ದಶಕಗಳಲ್ಲಿ, ಸಂಸ್ಥೆಯು ವಿಶ್ವಾಸಾರ್ಹತೆ, ವ್ಯಾಪ್ತಿ ಮತ್ತು ಸೇವಾ ಗುಣಮಟ್ಟಕ್ಕಾಗಿ ಬಲವಾದ ಖ್ಯಾತಿಯನ್ನು ನಿರ್ಮಿಸಿದೆ, ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ವೈವಿಧ್ಯಮಯ ಕೈಗಾರಿಕೆಗಳು ಮತ್ತು ಗ್ರಾಹಕರನ್ನು ಪೂರೈಸುತ್ತದೆ.

ವಿಶೇಷ ಲಾಜಿಸ್ಟಿಕ್ಸ್ ಪರಿಹಾರಗಳಿಗಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಗುರುತಿಸಿ, ಟಿಪಿಸಿ 14 ವರ್ಷಗಳ ಹಿಂದೆ ಪ್ರೀಮಿಯಂ ಸೇವೆಗಳ ವಿಭಾಗವನ್ನು ಪ್ರವೇಶಿಸಿತು, ಹೆಚ್ಚಿನ ಮಟ್ಟದ ಸೇವಾ ಭರವಸೆ, ವೇಗ ಮತ್ತು ವಿಶ್ವಾಸಾರ್ಹತೆಯ ಅಗತ್ಯವಿರುವ ವ್ಯವಹಾರಗಳಿಗೆ ಅನುಗುಣವಾಗಿ ಕಸ್ಟಮೈಸ್ ಮಾಡಿದ ಮತ್ತು ಸಮಯ–ಸೂಕ್ಷ್ಮ ವಿತರಣಾ ಪರಿಹಾರಗಳನ್ನು ನೀಡುತ್ತಿದೆ. ಪ್ರಮಾಣಿತ ಕೊರಿಯರ್ ಕೊಡುಗೆಗಳನ್ನು ಮೀರಿ ವರ್ಧಿತ ಲಾಜಿಸ್ಟಿಕ್ಸ್ ಕಾರ್ಯಕ್ಷಮತೆಯನ್ನು ಬಯಸುವ ಗ್ರಾಹಕರ ನಿರೀಕ್ಷೆಗಳನ್ನು ಪೂರೈಸಲು ಈ ಸೇವೆಗಳನ್ನು ವಿನ್ಯಾಸಗೊಳಿಸಲಾಗಿದೆ.




ಈ ಪ್ರೀಮಿಯಂ ಪೋರ್ಟ್‌ಫೋಲಿಯೊದ ಭಾಗವಾಗಿ, ಸುಧಾರಿತ ಸಾರಿಗೆ ಸಮಯಸೂಚಿಗಳು, ವರ್ಧಿತ ಕಾರ್ಯಾಚರಣೆಯ ಮೇಲ್ವಿಚಾರಣೆ ಮತ್ತು ಮೀಸಲಾದ ನಿರ್ವಹಣಾ ಪ್ರಕ್ರಿಯೆಗಳೊಂದಿಗೆ ಉನ್ನತ ಮಟ್ಟದ ಸೇವಾ ಅನುಭವವನ್ನು ಒದಗಿಸಲು ಪ್ರೊ ಪ್ರೀಮಿಯಂ ಅನ್ನು ಪರಿಚಯಿಸಲಾಗಿದೆ.

ವಿಶ್ವಾಸಾರ್ಹ, ಆದ್ಯತೆ ಆಧಾರಿತ ಲಾಜಿಸ್ಟಿಕ್ಸ್ ಪರಿಹಾರಗಳ ಅಗತ್ಯವಿರುವ ಗ್ರಾಹಕರಿಂದ ಪ್ರೊ ಪ್ರೀಮಿಯಂ ವ್ಯಾಪಕವಾಗಿ ಮೆಚ್ಚುಗೆ ಪಡೆದಿದೆ.

ತನ್ನ ನಾವೀನ್ಯತೆ ಮತ್ತು ಗ್ರಾಹಕ–ಕೇಂದ್ರಿತ ಸೇವಾ ವರ್ಧನೆಯ ಪರಂಪರೆಯನ್ನು ಮುಂದುವರೆಸುತ್ತಾ, ಟಿಪಿಸಿ ಈಗ ತನ್ನ ಅಲ್ಟ್ರಾ–ಪ್ರೀಮಿಯಂ ಸೇವೆ – ಪ್ರೊ ಇಎಕ್ಸ್ ಅನ್ನು ಪ್ರಾರಂಭಿಸುವುದಾಗಿ ಘೋಷಿಸಲು ಹೆಮ್ಮೆಪಡುತ್ತದೆ.

ಪ್ರೊ ಇಎಕ್ಸ್ ಮುಂದಿನ ಪೀಳಿಗೆಯ ಎಕ್ಸ್‌ಪ್ರೆಸ್ ಲಾಜಿಸ್ಟಿಕ್ಸ್ ಅನ್ನು ಪ್ರತಿನಿಧಿಸುತ್ತದೆ, ವೇಗ, ವಿಶ್ವಾಸಾರ್ಹತೆ ಮತ್ತು ಸಂಪೂರ್ಣ ಡಿಜಿಟಲ್ ಏಕೀಕರಣದ ಮೂಲಕ ಸಾಟಿಯಿಲ್ಲದ ಸಾಗಣೆ ಅನುಭವವನ್ನು ನೀಡಲು ವಿನ್ಯಾಸಗೊಳಿಸಲಾಗಿದೆ.

ಈ ವಿಶೇಷ ಸೇವೆಯು ಗ್ರಾಹಕರಿಗೆ ಅಂತ್ಯದಿಂದ ಕೊನೆಯವರೆಗೆ ಡಿಜಿಟಲ್ ಪ್ರವೇಶವನ್ನು ಒದಗಿಸಲು ಸುಧಾರಿತ ತಂತ್ರಜ್ಞಾನ ವ್ಯವಸ್ಥೆಗಳನ್ನು ಬಳಸಿಕೊಳ್ಳುತ್ತದೆ, ನೈಜ–ಸಮಯದ ಟ್ರ್ಯಾಕಿಂಗ್, ತ್ವರಿತ ಸಾಗಣೆ ನವೀಕರಣಗಳು, ವರ್ಧಿತ ಗೋಚರತೆ ಮತ್ತು ಉತ್ತಮ ಸೇವಾ ನಿಯಂತ್ರಣವನ್ನು ಸಕ್ರಿಯಗೊಳಿಸುತ್ತದೆ.

ವೇಗವಾದ ವಿತರಣಾ ಸಮಯಸೂಚಿಗಳು, ಕಾರ್ಯಾಚರಣೆಯ ನಿಖರತೆ ಮತ್ತು ಗ್ರಾಹಕರ ಅನುಕೂಲತೆಯ ಮೇಲೆ ಬಲವಾದ ಗಮನವನ್ನು ಹೊಂದಿರುವ ಪ್ರೊ ಇಎಕ್ಸ್, ಗರಿಷ್ಠ ಪಾರದರ್ಶಕತೆ ಮತ್ತು ದಕ್ಷತೆಯೊಂದಿಗೆ ಹೆಚ್ಚು ಸಮಯ–ನಿರ್ಣಾಯಕ ಮತ್ತು ಸುರಕ್ಷಿತ ಲಾಜಿಸ್ಟಿಕ್ಸ್ ಪರಿಹಾರಗಳ ಅಗತ್ಯವಿರುವ ವ್ಯವಹಾರಗಳು ಮತ್ತು ವ್ಯಕ್ತಿಗಳಿಗೆ ಸೇವೆ ಸಲ್ಲಿಸಲು ಸ್ಥಾನದಲ್ಲಿದೆ. ದೇಶಾದ್ಯಂತ ಈ ಹೊಸ ಸೇವೆಯ ಸರಾಗ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು, ಟಿಪಿಸಿ ಏಪ್ರಿಲ್ 11, 2026 ರಂದು ಅಖಿಲ ಭಾರತ ತರಬೇತಿ ಕಾರ್ಯಾಗಾರವನ್ನು ನಡೆಸುತ್ತಿದೆ, ಅದರ ಕಾರ್ಯಾಚರಣೆ ಮತ್ತು ಗ್ರಾಹಕ ಸೇವಾ ತಂಡಗಳಿಗೆ ಪ್ರೊ ಇಎಕ್ಸ್‌ಗೆ ಸಂಬಂಧಿಸಿದ ಪ್ರಕ್ರಿಯೆಗಳು, ತಂತ್ರಜ್ಞಾನ ವೇದಿಕೆಗಳು ಮತ್ತು ಸೇವಾ ಮಾನದಂಡಗಳ ಕುರಿತು ವಿಶೇಷ ತರಬೇತಿಯನ್ನು ಒದಗಿಸುತ್ತಿದೆ.

ಪ್ರೊ ಇಎಕ್ಸ್‌ನ ಅಧಿಕೃತ ಉಡಾವಣೆಯನ್ನು ಮೇ 4, 2026 ರಂದು ನಿಗದಿಪಡಿಸಲಾಗಿದೆ, ಪ್ರತಿ ತಿಂಗಳು ಪ್ರೊ ಇಎಕ್ಸ್ ಮುಂದಿನ ಪೀಳಿಗೆಯ ಎಕ್ಸ್‌ಪ್ರೆಸ್ ಲಾಜಿಸ್ಟಿಕ್ಸ್ ಅನ್ನು ಪ್ರತಿನಿಧಿಸುತ್ತದೆ, ವೇಗ, ವಿಶ್ವಾಸಾರ್ಹತೆ ಮತ್ತು ಸಂಪೂರ್ಣ ಡಿಜಿಟಲ್ ಏಕೀಕರಣದ ಮೂಲಕ ಸಾಟಿಯಿಲ್ಲದ ಸಾಗಣೆ ಅನುಭವವನ್ನು ನೀಡಲು ವಿನ್ಯಾಸಗೊಳಿಸಲಾಗಿದೆ.

ಈ ವಿಶೇಷ ಸೇವೆಯು ಗ್ರಾಹಕರಿಗೆ ಅಂತ್ಯದಿಂದ ಕೊನೆಯವರೆಗೆ ಡಿಜಿಟಲ್ ಪ್ರವೇಶವನ್ನು ಒದಗಿಸಲು ಸುಧಾರಿತ ತಂತ್ರಜ್ಞಾನ ವ್ಯವಸ್ಥೆಗಳನ್ನು ಬಳಸಿಕೊಳ್ಳುತ್ತದೆ, ನೈಜ–ಸಮಯದ ಟ್ರ್ಯಾಕಿಂಗ್, ತ್ವರಿತ ಸಾಗಣೆ ನವೀಕರಣಗಳು, ವರ್ಧಿತ ಗೋಚರತೆ ಮತ್ತು ಉತ್ತಮ ಸೇವಾ ನಿಯಂತ್ರಣವನ್ನು ಸಕ್ರಿಯಗೊಳಿಸುತ್ತದೆ.

# ದೇಶದಲ್ಲಿ ವಂದೇ ಭಾರತ್ ರೈಲಿನ ಹವಾ: ಪ್ರಯಾಣಿಕರ ಸಂಖ್ಯೆ ಶೇ.34ರಷ್ಟು ಏರಿಕೆ

ನವದೆಹಲಿ: ಭಾರತೀಯ ರೈಲ್ವೆ ವ್ಯಾಪ್ತಿಯಲ್ಲಿ ಕ್ರಾಂತಿ ಸೃಷ್ಟಿಸಿದ ವಂದೇ ಭಾರತ್ ರೈಲುಗಳಿಗೆ (Vande Bharat Express Train) ಬೇಡಿಕೆ ಹೆಚ್ಚಾಗಿದೆ.

ರೈಲ್ವೆ ಇಲಾಖೆ ಈಗಾಗಲೇ ಹೊಸ ಮಾರ್ಗ, ರೈಲು ಹಳಿ ಡಬ್ಲಿಂಗ್, ಬೋಗಿಗಳ ಹೆಚ್ಚಳ ಸೇರಿ ಇನ್ನಿತರ ಮೂಲಸೌಕರ್ಯ ಸುಧಾರಿಸುತ್ತಿದೆ. ಇದರ ನಡುವೆ ವೇಗದ



ಹಾಗೂ ಐಶಾರಾಮಿ ಮತ್ತು ಆರಾಮದಾಯಕ ಅನುಭವ ನೀಡುವ ವಂದೇ ಭಾರತ್ ಮೇಲಿನ ಪ್ರಯಾಣಿಕರ ಅವಲಂಬನೆ ಹೆಚ್ಚಾಗಿದೆ. ವರ್ಷದಿಂದ ವರ್ಷಕ್ಕೆ ಪ್ರಯಾಣಿಕರ ಸಂಖ್ಯೆಯಲ್ಲಿ ಭಾರೀ ಏರಿಕೆ ಆಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚೆನ್ನೈ ಮೂಲದ ಇಂಟಿಗ್ರಲ್ ಕೋಚ್ ಫ್ಯಾಕ್ಟರಿ (ICF) ತಯಾರಿಸಿದ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಆಧುನಿಕ ಕೋಚ್‌ಗಳು, ಸುಧಾರಿತ ಸುರಕ್ಷತಾ ವೈಶಿಷ್ಟ್ಯಗಳು ಮತ್ತು ಪ್ರಯಾಣಿಕ ಸ್ನೇಹಿ ಸೌಲಭ್ಯಗಳನ್ನು ಹೊಂದಿವೆ. ಹೀಗಾಗಿಯೇ ಜನರು ಇದಕ್ಕೆ ಮಾರು ಹೋಗಿದ್ದಾರೆ.

2025–26ನೇ ಹಣಕಾಸು ವರ್ಷದಲ್ಲಿ, ವಂದೇ ಭಾರತ್ ಎಕ್ಸ್‌ಪ್ರೆಸ್ ವರ್ಷದಿಂದ ವರ್ಷಕ್ಕೆ ಸುಮಾರು ಶೇ. 34 ರಷ್ಟು ಬೆಳವಣಿಗೆಯನ್ನು ದಾಖಲಿಸಿದೆ. 2025–2026ರಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ಪ್ರಯಾಣಿಕರ ಸಂಖ್ಯೆ ಸುಮಾರು 3.98 ಕೋಟಿಗೆ ಏರಿದೆ. ಈ ಹಿಂದಿನ 2024–25ನೇ ಹಣಕಾಸು ವರ್ಷದಲ್ಲಿ ಇದರ ಸಂಖ್ಯೆ 2.97 ಕೋಟಿಯಷ್ಟಿತ್ತು.

ಭಾರತದ ವಂದೇ ಭಾರತ್ ರೈಲುಗಳೆಷ್ಟು 9.1 ಕೋಟಿ ಪ್ರಯಾಣಿಕರು! ಹೆಚ್ಚುತ್ತಿರುವ ಈ ಪ್ರಯಾಣಿಕರ ಸಂಖ್ಯೆ ಕೇವಲ ಒಂದು ರಾಜ್ಯ, ಒಂದೆರಡು ಮಾರ್ಗದಲ್ಲಿ ಏರಿಕೆ ಆಗಿದ್ದಲ್ಲ.

ದೇಶಾದ್ಯಂತ ಇರುವ ಎಲ್ಲ ವಂದೇ ಭಾರತ್ ರೈಲುಗಳಲ್ಲಿ ಹೆಚ್ಚಾಗಿರುವುದಾಗಿದೆ. ಸದ್ಯ ದೇಶದಲ್ಲಿ ಒಟ್ಟು 162 ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ನಿತ್ಯ ಅನೇಕ ಮಾರ್ಗಗಳಲ್ಲಿ ಸಂಚಾರ ಮಾಡುತ್ತಿವೆ. ರೈಲ್ವೆ ಸಚಿವಾಲಯವೇ ನೀಡಿರುವ ಅಧಿಕೃತ ಮಾಹಿತಿ ಪ್ರಕಾರ, ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಆರಂಭವಾದಾಗಿನಿಂದ 1 ಲಕ್ಷಕ್ಕೂ ಹೆಚ್ಚು ಟ್ರಿಪ್‌ಗಳಲ್ಲಿ 9.1 ಕೋಟಿಗೂ ಹೆಚ್ಚು ಪ್ರಯಾಣಿಕರು ಪ್ರಯಾಣಿಸಿದ್ದಾರೆ ಎಂದು ತಿಳಿಸಿದೆ.

ವಂದೇ ಭಾರತ್ ರೈಲಿನ ಟ್ರಾಫಿಕ್ ರೂಟ್ ಇದು ಭಾರತೀಯ ರೈಲ್ವೆ ಇಲಾಖೆಯು ವೇಗದ ಹಾಗೂ ಸುರಕ್ಷಿತ, ಆರಾಮದಾಯಕ ಅನುಭವ ನೀಡುವ ಈ ವಂದೇ ಭಾರತ್ ರೈಲನ್ನು 2019ರಲ್ಲಿ ಪರಿಚಯಿಸಿತು.

ನವದೆಹಲಿ–ವಾರಣಾಸಿ ಮಧ್ಯೆ ಮೊದಲ ವಂದೇ ಭಾರತ್ ರೈಲು ಸಂಚಾರವನ್ನು 2019ರ ಫೆಬ್ರವರಿ ಆರಂಭಿಸಿತ್ತು. ಈ ಮಾರ್ಗವು ಅತ್ಯಂತ ಜನದಟ್ಟಣೆಯ ಮಾರ್ಗವಾಗಿದ್ದು, ಈ ರೈಲಿನಲ್ಲಿನ ಜನರು ಹೆಚ್ಚಾಗಿ ತುಂಬಿರುತ್ತಾರೆ ಎನ್ನಲಾಗಿದೆ.

ಸದರಿ ಮಾರ್ಗದ ವಂದೇ ಭಾರತ್ ರೈಲಿನಲ್ಲಿ 2026ರವರೆಗೆ 73 ಲಕ್ಷಕ್ಕೂ ಹೆಚ್ಚು ಪ್ರಯಾಣಿಕರ ಸಂಚರಿಸಿದ್ದಾರೆಂದು ಇಲಾಖೆ ಅಧಿಕೃತ ಅಂಕಿ ಸಂಖ್ಯೆ ನೀಡಿದೆ.

ಕೇವಲ ಒಂದು ಮಾರ್ಗದಲ್ಲಿ ಇಷ್ಟೊಂದು ಜನರೆಂದರೆ ಇನ್ನೂ ಕರ್ನಾಟಕ ಸೇರಿದಂತೆ ದೇಶಾದ್ಯಂತ 162 ವಂದೇ ಭಾರತ್ ರೈಲುಗಳಲ್ಲಿ ಎಷ್ಟು ಕೋಟ್ಯಾಂತರ ಜನ ಸಂಚರಿಸಿದ್ದಾರೆ. ಇದೆಲ್ಲ ನೋಡಿದರೆ ವರ್ಷದಿಂದ ವರ್ಷಕ್ಕೆ ಸಾಮಾನ್ಯ, ಎಕ್ಸ್‌ಪ್ರೆಸ್ ರೈಲುಗಳ ರೀತಿಯಲ್ಲಿ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳ ಪ್ರಯಾಣಿಕರ ಸಂಖ್ಯೆಯಲ್ಲಿ ಗಮನಾರ್ಹ ಹೆಚ್ಚಳ ಕಂಡು ಬಂದಿದೆ.

# ಬಾಲಕಿಯ ಮೇಲೆ ಅತ್ಯಾಚಾರ ನಡೆಸಿ ಗರ್ಭನಿರೋಧಕ ಮಾತ್ರೆ ತಿನ್ನಿಸಿದ ಯುವಕ: ಚಿಕಿತ್ಸೆ ವೇಳೆ ಹುಡುಗಿ ಸಾವು

ಬುರ್ಹಾನ್‌ಪುರ (ಮಧ್ಯಪ್ರದೇಶ) : ಗರ್ಭನಿರೋಧಕ ಮಾತ್ರೆಗಳನ್ನು ಸೇವಿಸಿ ಬಾಲಕಿಯೊಬ್ಬರು ಸಾವನ್ನಪ್ಪಿರುವ ಆಘಾತಕಾರಿ ಘಟನೆ ಬೆಳಕಿಗೆ ಬಂದಿದೆ. ಇನ್‌ಸ್ಟಾಗ್ರಾಮ್‌ನಲ್ಲಿ ಬೆಳೆದ ಸ್ನೇಹವು ಅಂತಿಮವಾಗಿ ತನ್ನ ಸಾವಿಗೆ ಕಾರಣವಾಗುತ್ತದೆ ಎಂದು ಬಾಲಕಿ ಊಹಿಸಿರಲಿಲ್ಲವೇನೋ.

ಘಟನೆಯ ಹಿನ್ನೆಲೆ: ಬಾಲಕಿ ಇತ್ತೀಚೆಗೆ ಮೋಮಿನ್‌ಪುರದಲ್ಲಿ ವಾಸಿಸುತ್ತಿರುವ 25 ವರ್ಷದ ವ್ಯಕ್ತಿಯೊಂದಿಗೆ ಸ್ನೇಹ ಬೆಳೆಸಿದ್ದಳು. ನಂತರ ಆ ವ್ಯಕ್ತಿ ಆಕೆಯನ್ನು ಹೋಟೆಲ್‌ಗೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದ. ಬಾಲಕಿ ಗರ್ಭಿಣಿಯಾದಾಗ ಆಕೆಗೆ ಗರ್ಭನಿರೋಧಕ ಮಾತ್ರೆಗಳನ್ನು ನೀಡಿದ್ದಾನೆ. ಅದನ್ನು ಸೇವಿಸಿದ ನಂತರ ಬಾಲಕಿ ಅಸಹನೀಯ ಹೊಟ್ಟೆ ನೋವಿನಿಂದ ಬಳಲಿದ್ದಾಳೆ.

ಅವಳು ಗರ್ಭಿಣಿಯಾಗಿದ್ದಾಳೆ ಎಂದು ತಿಳಿದು ಬಂದಾಗ ಆಕೆಯ ಕುಟುಂಬದ ಸದಸ್ಯರು ಆಕೆಯನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಲ್ಲಿ ಆಕೆಯ ಆರೋಗ್ಯ ಇನ್ನಷ್ಟು ಹದಗೆಟ್ಟಿದೆ. ಚಿಕಿತ್ಸೆ ಪಡೆಯುತ್ತಿರುವಾಗ ಬಾಲಕಿ ನಿಧನರಾಗಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಖಾಂಡ್ವಾ ಪೊಲೀಸರು, ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ ಬಳಿಕ ಜೈಲಿಗೆ ಕಳುಹಿಸಿದ್ದಾರೆ.

ಪ್ರಕರಣದ ಬಗ್ಗೆ ಪೊಲೀಸರು ಹೇಳಿದ್ದಿಷ್ಟು: ಠಾಣೆಯ ಉಸ್ತುವಾರಿ ಗಣೇಶ್ ಮಹಾಲೆ ಪ್ರಕರಣದ ಬಗ್ಗೆ ಮಾಹಿತಿ ನೀಡಿದ್ದು, 'ಸುಮಾರು ಒಂದೂವರೆ ತಿಂಗಳ ಹಿಂದೆ,

ಯುವಕ ಬಾಲಕಿಯನ್ನು ತಾಪಿ ಸೇತುವೆ ಬಳಿಯಿರುವ ತಾಜ್ ಹೋಟೆಲ್‌ಗೆ ಕರೆದೊಯ್ದು ಅಲ್ಲಿ ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಈ ಅವಧಿಯಲ್ಲಿ ಹುಡುಗಿ ಗರ್ಭಿಣಿಯಾಗಿದ್ದಾಳೆ. ನಂತರ, ಅವಳಿಗೆ ಮಾತ್ರೆಗಳನ್ನು ನೀಡುವ ಮೂಲಕ ಗರ್ಭಪಾತ ಮಾಡಿಸಲು ಪ್ರಯತ್ನಿಸಿದ್ದಾನೆ. ಇದರಿಂದಾಗಿ ಅವಳು ಪ್ರಾಣ ಕಳೆದುಕೊಂಡಿದ್ದಾಳೆ.



ಪ್ರಕರಣವನ್ನು ಗಣಪತಿ ಪೊಲೀಸ್ ಠಾಣೆಗೆ ವರ್ಗಾಯಿಸಲಾಗಿದೆ. ಈ ಸಂಬಂಧ ಪೊಲೀಸರು ತಕ್ಷಣವೇ ಆರೋಪಿ ಮೋಮಿನ್‌ಪುರ ನಿವಾಸಿ ಗಣೇಶ್ ಚೌಧರಿ ಎಂಬುವವನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದಾರೆ. ಅಲ್ಲಿಂದ ಆತನನ್ನು ಜೈಲಿಗೆ ಕಳುಹಿಸಲಾಗಿದೆ. ಹೋಟೆಲ್ ನಿರ್ವಾಹಕನ ವಿರುದ್ಧವೂ ಪೊಲೀಸರು ಕಾನೂನು ಕ್ರಮ ಕೈಗೊಳ್ಳಲಿದ್ದಾರೆ ಎಂದು ತಿಳಿಸಿದ್ದಾರೆ.

ಈ ಘಟನೆಯ ಬಗ್ಗೆ ಪ್ರತಿಕ್ರಿಯಿಸಿದ ಸಾಮಾಜಿಕ ಕಾರ್ಯಕರ್ತ ಓಂ ಆಜಾದ್, 17 ವರ್ಷದ ಬಾಲಕಿಯ ಮೇಲೆ ಘೋರ ಕ್ರೌರ್ಯ ಎಸಗಲಾಗಿದೆ. ಆಕೆ ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ಸಹಿಸಿಕೊಂಡು, ಅಂತಿಮವಾಗಿ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದಾಳೆ. ಆರೋಪಿಯು ಇನ್‌ಸ್ಟಾಗ್ರಾಮ್ ಮೂಲಕ ಅಪ್ರಾಪ್ತ ಬಾಲಕಿಯೊಂದಿಗೆ ಸಂಪರ್ಕ ಸಾಧಿಸಿ, ಅವಳನ್ನು ತನ್ನ ಬಲೆಗೆ ಬೀಳಿಸಿಕೊಂಡು ನಂತರ ಅವಳನ್ನು ಶೋಷಿಸಿದ್ದಾನೆ. ತಪತಿಯಲ್ಲಿರುವ ಹೋಟೆಲ್‌ನಲ್ಲಿ ಬಾಲಕಿಯ ಮೇಲೆ ಅತ್ಯಾಚಾರ ನಡೆದಿದೆ ಎಂದು ವರದಿಗಳು ಸೂಚಿಸುತ್ತವೆ. ಹುಡುಗಿಯ ಜೀವ ಉಳಿಯುತ್ತದೆ ಎಂದು ನಾವು ಭಾವಿಸಿದ್ದೆವು. ಆದರೆ, ಅವಳು ಸಾವನ್ನಪ್ಪಿದ್ದಾಳೆ. ಆರೋಪಿಗೆ ಸಾಧ್ಯವಾದಷ್ಟು ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದ್ದಾರೆ.

# ಆಸ್ತಿಗಾಗಿ ಮಗನನ್ನೇ ಕೊಂದ ತಂದೆ ಸೇರಿ ಮೂವರಿಗೆ ಜೀವಾವಧಿ ಶಿಕ್ಷೆ

ಕಾರವಾರ (ಉತ್ತರ ಕನ್ನಡ): ಆಸ್ತಿ ವಿಚಾರಕ್ಕೆ ಮಗನನ್ನೇ ಕೊಲೆ ಮಾಡಿದ ತಂದೆ ಹಾಗೂ ಇಬ್ಬರು ಸಂಬಂಧಿಕರು ಸೇರಿದಂತೆ ಮೂವರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಮತ್ತು ದಂಡ ವಿಧಿಸಿ ಶಿರಸಿಯ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಶುಕ್ರವಾರ ಮಹತ್ವದ ತೀರ್ಪು ನೀಡಿದೆ.

ಹಳಿಯಾಳ ಪೊಲೀಸ್ ಠಾಣೆ ವ್ಯಾಪ್ತಿಯ ಬಿಡೊಳ್ಳಿ ಗ್ರಾಮದಲ್ಲಿ ಕೇಶವ ಎಂಬ ಯುವಕನ ಕೊಲೆ ನಡೆದಿತ್ತು. ಈ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ, ನ್ಯಾಯಾಲಯವು ಮೂವರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ಮತ್ತು ದಂಡ ವಿಧಿಸಿದೆ.

ಅಕ್ಷಯ್ ಅಲಿಯಾಸ್ ಆಕಾಶ್ ಕಿತ್ತೂರಕರ್, ಪಾಂಡುರಂಗ ಕಿತ್ತೂರಕರ್ ಹಾಗೂ ಲತಾ ಅಲಿಯಾಸ್ ತುಳಸಾಯಿ ಕಿತ್ತೂರಕರ್ ಎಂಬುವವರೇ ಶಿಕ್ಷೆಗೆ ಗುರಿಯಾದ ಅಪರಾಧಿಗಳು. ಇವರಿಗೆ ಜೀವಾವಧಿ ಶಿಕ್ಷೆ ಸಹಿತ ತಲಾ 25 ರೂ.ಗಳ ದಂಡ ವಿಧಿಸಿ ನ್ಯಾಯಾಧೀಶರಾದ ಕಿರಣ ಕಿಣಿ ಅವರು ಆದೇಶ ಹೊರಡಿಸಿದ್ದಾರೆ.

ಪಾಂಡುರಂಗ ಕಿತ್ತೂರಕರ್‌ನ ಮೊದಲ ಹೆಂಡತಿಯ ಮಗನಾದ ಕೇಶವ ತನಗೆ ಬರಬೇಕಾದ ಆಸ್ತಿಯ ಪಾಲನ್ನು ಕೇಳಿದ್ದೇ ಆತನ ಪ್ರಾಣಕ್ಕೆ ಸಂಚಕಾರವಾಗಿತ್ತು. ಮಗನಿಗೆ ಆಸ್ತಿ ನೀಡುವುದನ್ನು ತಪ್ಪಿಸುವ ಉದ್ದೇಶದಿಂದ ಆರೋಪಿಗಳು ಸಂಚು ರೂಪಿಸಿ, ಪ್ಲಾಸ್ಟಿಕ್ ಹಗ್ಗದಿಂದ ಆತನ ಮೇಲೆ ಮನಬಂದಂತೆ ಹಲ್ಲೆ ನಡೆಸಿದ್ದರು. ಬಳಿಕ ಆತನನ್ನು ಕಂಬಕ್ಕೆ ಕಟ್ಟಿ ಹಾಕಿ ಕ್ರೂರವಾಗಿ ಕೊಲೆ ಮಾಡಿ, ಸಾಕ್ಷ್ಯಗಳನ್ನು ನಾಶಪಡಿಸಲು ಪ್ರಯತ್ನಿಸಿದ್ದರು.

ಈ ಗಂಭೀರ ಪ್ರಕರಣದ ಕುರಿತು ಹಳಿಯಾಳ ಪೊಲೀಸ್ ಠಾಣೆಯ ಅಂದಿನ ತನಿಖಾಧಿಕಾರಿ ಹಾಗೂ ಉಪನಿರೀಕ್ಷಕ ಬಿ.ಎಸ್. ಲೋಕಾಪುರ ಅವರು ಸಮಗ್ರ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದರು. ವಿಚಾರಣೆಯ ಸಂದರ್ಭದಲ್ಲಿ ಹಳಿಯಾಳ ಠಾಣೆ ಪೊಲೀಸ್ ಕಾನ್ಸ್‌ಟೇಬಲ್ ಹನುಮಂತ ಬಗಿ ಅವರು ಸಾಕ್ಷಿದಾರರನ್ನು ಕಾಲಕಾಲಕ್ಕೆ ನ್ಯಾಯಾಲಯಕ್ಕೆ ಹಾಜರು ಪಡಿಸುವ ಮೂಲಕ ಕಾನೂನು ಪ್ರಕ್ರಿಯೆಗೆ ಸಹಕರಿಸಿದ್ದರು.



ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ರಾಜೇಶ್ ಎಂ. ಮಳಗೀಕರ್ ಸುದೀರ್ಘ ವಾದ ಮಂಡಿಸಿ, ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಕೋರಿದ್ದರು. ವಾದ, ಪ್ರತಿವಾದಗಳನ್ನು ಆಲಿಸಿದ ನ್ಯಾಯಾಲಯವು ಅಂತಿಮವಾಗಿ ಈ ತೀರ್ಪನ್ನು ಪ್ರಕಟಿಸಿದೆ.

ಪ್ರತ್ಯೇಕ ಕೇಸ್: ಪೊಲೀಸ್ ಠಾಣೆಯಲ್ಲಿ ಮ್ಯೂಲ್ ಖಾತೆ ನೈಜತೆ ಪರಿಶೀಲನಾ ಸಂಬಂಧ ಹಾಜರಾಗಿದ್ದಾಗ ಅಸಂಬದ್ಧ ಹಾಗೂ ಏರುದನಿಯಲ್ಲಿ ಮಾತನಾಡಿ, ಖಾತೆಗೆ ಸಂಬಂಧಿಸಿದ ಸಮರ್ಪಕ ದಾಖಲಾತಿ ನೀಡಲು ಹಿಂಜರಿದ ಯುವಕನಿಗೆ ಚಾಮರಾಜನಗರದ ಸಿ.ಜೆ.ಎಂ ನ್ಯಾಯಾಲಯವು ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಎರಡು ದಿನ ಸಮುದಾಯ ಸೇವೆಗಾಗಿ ಪೊಲೀಸರಿಗೆ ಸಹಾಯ ಮಾಡುವಂತೆ ಶಿಕ್ಷೆ ವಿಧಿಸಿತ್ತು.

ಚಾಮರಾಜನಗರ ತಾಲೂಕಿನ ಕೊತ್ತಲವಾಡಿ ಗ್ರಾಮದ ಆನಂದ್ ಎಂಬಾತ ಶಿಕ್ಷೆಗೊಳಗಾದ ಯುವಕ. ಕರ್ತವ್ಯದಲ್ಲಿದ್ದ ಪೊಲೀಸ್ ಸಿಬ್ಬಂದಿಯೊಂದಿಗೆ ಪರಿಶೀಲನಾ ಪ್ರಕ್ರಿಯೆ ವೇಳೆ ಸಹಕರಿಸದೇ ಅನುಚಿತವಾಗಿ ವರ್ತಿಸಿದ್ದ ಹಿನ್ನೆಲೆಯಲ್ಲಿ ಯುವಕನ ವಿರುದ್ಧ ಕರ್ನಾಟಕ ಪೊಲೀಸ್ ಕಾಯ್ದೆ ಅನ್ವಯ 1965 ಲಘು ಪ್ರಕರಣ ಕಲಂ M ಆಯಂಡ್ ಕ್ಯೂ ಅಡಿ ಪ್ರಕರಣ ದಾಖಲಾಗಿತ್ತು.

# ಬಾಲಕಿ ಪ್ರೀತಿಸುವ ನಾಟಕವಾಡಿ ಅಪಹರಿಸಿ ಲೈಂಗಿಕ ದೌರ್ಜನ್ಯ ಪ್ರಕರಣ: ಅಪರಾಧಿಗೆ 20 ವರ್ಷಗಳ ಕಠಿಣ ಸಜೆ

ಮಂಗಳೂರು: ಬಾಲಕಿಯನ್ನು ಪ್ರೀತಿಸುವ ನಾಟಕವಾಡಿ ಬಳಿಕ ಅಪಹರಿಸಿ ಲೈಂಗಿಕ ದೌರ್ಜನ್ಯವೆಸಗಿದ ಪ್ರಕರಣದಲ್ಲಿ ಮಂಗಳೂರಿನ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಎಫ್‌ಟಿಎಸ್ ಸಿ–2(ಪೋಕ್ಸೋ) ಅಪರಾಧಿಗೆ ದಂಡ ಸಹಿತ 20 ವರ್ಷಗಳ ಕಠಿಣ ಸಜೆ ವಿಧಿಸಿ ತೀರ್ಪು ನೀಡಿದೆ.

ಗದಗ ಜಿಲ್ಲೆ ರೋಣ ತಾಲೂಕಿನ ಹೊಳೆ ಮುನ್ನೂರು ಮೂಲದವನಾದ ಕಾವೂರು ಬಾಡಿಗೆ ಮನೆ ನಿವಾಸಿ ಮಹೇಶ ಮಾದರ (20) ಶಿಕ್ಷೆಗೊಳಗಾದವ.

ಪ್ರಕರಣದ ವಿವರ: ಸಂತ್ರಸ್ತ 15 ವರ್ಷದ ಬಾಲಕಿ ಮೂಲತಃ ಹೊರ ಜಿಲ್ಲೆಯವಳಾಗಿದ್ದು ತಂದೆ, ತಾಯಿಯೊಂದಿಗೆ ನಗರದ ಹೊರವಲಯದ ಬಾಡಿಗೆ ಮನೆಯಲ್ಲಿ ವಾಸವಿದ್ದಳು. ಮಹೇಶ ಮಾದರ ಕೂಲಿ ಕೆಲಸ ಮಾಡುತ್ತಿದ್ದ. ಯುವಕ ಹಾಗೂ ಬಾಲಕಿ ಇಬ್ಬರೂ ಪರಿಚಯವಾಗಿ ಒಬ್ಬರನ್ನೊಬ್ಬರು ಪ್ರೀತಿಸುತ್ತಿದ್ದರು.

ಈ ವಿಚಾರ ತಿಳಿದು ಹೆತ್ತವರು ಆಕೆಗೆ ಬುದ್ದಿಮಾತು ಹೇಳಿದ್ದು, ಆತನ ಸಂಪರ್ಕದಿಂದ ದೂರ ಮಾಡಿ, ಆಕೆ ಮಾಡುತ್ತಿದ್ದ ಮನೆ ಕೆಲಸದಿಂದ ಬಿಡಿಸಿದ್ದರು. ಆದರೆ, ತಾನು ಕೆಲಸಕ್ಕೆ ಹೋಗಬೇಕು ಎಂದು ಹಠ ಮಾಡಿ, ಬಾಲಕಿ 2015ರ ಮೇ 14ರಂದು ಮತ್ತೆ ಬೇರೊಂದು ಮನೆಯಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದಳು.

ಕೊಲೆ ಬೆದರಿಕೆ ಹಾಕಿದ್ದ ಆರೋಪಿ: 2015ರ ಮೇ 19ರಂದು ಮನೆಯೊಂದರಲ್ಲಿ ಆಕೆ ಕೆಲಸ ಮಾಡುತ್ತಿದ್ದ ವೇಳೆ ಕರೆ ಮಾಡಿದ ಮಹೇಶ, ನೀನು ಕೂಡಲೇ ಹೊರಟು ಬಾ, ನಾವಿಬ್ಬರೂ ಬೇರೆ ಕಡೆ ಹೋಗೋಣ. ಬಾರದೇ ಇದ್ದರೆ, ನಿನ್ನ ತಂದೆ–ತಾಯಿಯನ್ನು ಕೊಂದು ತಾನೂ ಸಾಯುವುದಾಗಿ ಬೆದರಿಕೆ ಹಾಕಿದ್ದ.

ಬಳ್ಳಾರಿಗೆ ತೆರಳಿದ್ದರು: ಯುವಕನ ಬೆದರಿಕೆಗೆ ಮಣಿದ ಬಾಲಕಿ ಬಲ್ಲಾಳ್ ಬಾಗ್‌ಗೆ ಬಂದಿದ್ದು, ಅಲ್ಲಿಂದ ಆಟೋದಲ್ಲಿ ಕಾವೂರು ಬಳಿಯ ಶೆಡ್‌ಗೆ ಕರೆದುಕೊಂಡು ಹೋಗಿದ್ದ. ಇಬ್ಬರೂ ಅಲ್ಲಿ ಉಳಿದುಕೊಂಡಿದ್ದು, ಅಂದು ರಾತ್ರಿ ಬಾಲಕಿಯ



ಇಚ್ಛೆಗೆ ವಿರುದ್ಧವಾಗಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಮೇ 20ರಂದು ಬೆಳಗ್ಗೆ 11 ಗಂಟೆಗೆ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಬಳ್ಳಾರಿ ನಗರಕ್ಕೆ ಹೋಗಿ, ಬಾಡಿಗೆ ಮನೆಗಾಗಿ ಹುಡುಕಾಟ ನಡೆಸಿದ್ದರು.

ಆದರೆ ಸಿಗದಿದ್ದಾಗ, ನಾಗಲಕೇರೆ ಎಂಬಲ್ಲಿ ಜನವಸತಿ ಇಲ್ಲದ ಪಾಳುಬಿದ್ದ ಮನೆಯಲ್ಲಿ ಇಬ್ಬರೂ ಉಳಿಸಿಕೊಂಡಿದ್ದರು. ಮೇ 22ರಂದು ಅಲ್ಲಿಯೂ ಹಲವು ಬಾರಿ ಲೈಂಗಿಕ ದೌರ್ಜನ್ಯ ಎಸಗಿರುವ ಬಗ್ಗೆ ಬಾಲಕಿ ದೂರು ನೀಡಿದ್ದಳು.

ನಾಪತ್ತೆ ಪ್ರಕರಣ ದಾಖಲು: ಇತ್ತ, ಕೆಲಸ ಮಾಡುತ್ತಿದ್ದ ಮನೆಯಿಂದ ಬಾಲಕಿ ನಾಪತ್ತೆಯಾದ ಬಗ್ಗೆ ಮನೆಯವರು ಪಾಂಡೇಶ್ವರ ಠಾಣೆಗೆ ದೂರು ನೀಡಿದ್ದರು.

ಬಳಿಕ ಪೊಲೀಸರು ಬಾಲಕಿಯನ್ನು ಪತ್ತೆ ಮಾಡಿ ವಿಚಾರಣೆ ನಡೆಸಿದಾಗ ಲೈಂಗಿಕ ದೌರ್ಜನ್ಯ ಪ್ರಕರಣ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ಪಾಂಡೇಶ್ವರ ಠಾಣೆಯಲ್ಲಿ ಬಿಎನ್‌ಎಸ್ ಕಲಂ 137(2), 65(1) ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಅಧಿನಿಯಮ ಮತ್ತು ನಿಯಮ 2012 (ಪೋಕ್ಸೋ) ಕಲಂ 52 ಮತ್ತು 6ರಡಿ ಮಹೇಶ ಮಾದರನ ವಿರುದ್ಧ ಪ್ರಕರಣ ದಾಖಲಾಗಿತ್ತು.

ಪ್ರಕರಣದ ಬಗ್ಗೆ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಎಫ್‌ಟಿಎಸ್ ಸಿ–2(ಪೋಕ್ಸೋ) ನ್ಯಾಯಾಲಯದ ನ್ಯಾಯಾಧೀಶರಾದ ಮಾನು ಕೆ.ಎಸ್. ಅವರು ಸಮಗ್ರ ವಿಚಾರಣೆ ನಡೆಸಿ, ಮಹೇಶನ ಮೇಲಿನ ಅಪರಾಧ ಸಾಬೀತಾದ ಹಿನ್ನೆಲೆಯಲ್ಲಿ ಶಿಕ್ಷೆ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ.

ಅಪರಾಧಿಗೆ 20 ವರ್ಷ ಕಠಿಣ ಶಿಕ್ಷೆ ಮತ್ತು 30 ಸಾವಿರ ರೂ. ದಂಡ ವಿಧಿಸಲಾಗಿದೆ. ಒಂದು ವೇಳೆ ದಂಡ ಭರಿಸಲು ತಪ್ಪಿದಲ್ಲಿ ಹೆಚ್ಚುವರಿ 3 ತಿಂಗಳ ಸಾದಾ ಸಜೆ ಅನುಭವಿಸಬೇಕು. ಬಾಲಕಿಯ ಅಪಹರಣ ಮಾಡಿರುವ ಅಪರಾಧಕ್ಕೆ 3 ವರ್ಷ ಕಠಿಣ ಸಜೆ ಹಾಗೂ 5 ಸಾವಿರ ರೂ. ದಂಡ, ತಪ್ಪಿದಲ್ಲಿ 1 ತಿಂಗಳ ಸಾದಾ ಸಜೆ ಅನುಭವಿಸಬೇಕು. ದಂಡದ ಮೊತ್ತ 35 ಸಾವಿರ ರೂ.ಗಳನ್ನು ಸಂತ್ರಸ್ತೆಗೆ ನೀಡಬೇಕು. ಜೊತೆಗೆ ಸಂತ್ರಸ್ತೆಗೆ ಕಾನೂನು ಸೇವಾ ಪ್ರಾಧಿಕಾರದಿಂದ ಪರಿಹಾರವಾಗಿ 3.65 ಲಕ್ಷ ರೂ. ನೀಡಬೇಕು ಎಂದು ನ್ಯಾಯಾಧೀಶರು ಆದೇಶ ನೀಡಿದ್ದಾರೆ.

ಕಾವೂರು ಠಾಣೆಯ ಅಂದಿನ ಪಿಎಸ್‌ಐ ರೇಖಾ ಆರ್. ಆರಂಭಿಕ ತನಿಖೆ ನಡೆಸಿದ್ದು, ಬಳಿಕ ಪೊಲೀಸ್ ನಿರೀಕ್ಷಕ ಗುರುರಾಜ್ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪೋಕ್ಸೋ ವಿಶೇಷ ಸರ್ಕಾರಿ ಅಭಿಯೋಜಕಿ ಸಹನಾದೇವಿ ಬೋಳೂರು ವಾದ ಮಂಡಿಸಿದ್ದರು.

# ಮಹೇಶ್ ಶೆಟ್ಟಿ ತಿಮರೋಡಿ ಮೂರನೇ ಬಾರಿಗೆ ಗಡಿಪಾರು ಆದೇಶಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ಸಾಮಾಜಿಕ ಹೋರಾಟಗಾರ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರಿನ ಮಾನ್ವಿ ತಾಲೂಕಿಗೆ ಮೂರನೇ ಬಾರಿಗೆ ಗಡಿಪಾರು ಮಾಡಿ ಹೊರಡಿಸಿರುವ ಆದೇಶವನ್ನು ಏಪ್ರಿಲ್ 16ರವರೆಗೆ ಜಾರಿ ಮಾಡದಂತೆ ಸರ್ಕಾರ ಮತ್ತು ಪುತ್ತೂರು ಉಪ ವಿಭಾಗಾಧಿಕಾರಿಗೆ ಹೈಕೋರ್ಟ್ ಸೂಚಿಸಿದೆ.

ಬೆಳ್ತಂಗಡಿ ವಿದ್ಯಾರ್ಥಿನಿ ಕೊಲೆ ಪ್ರಕರಣ ಸಂಬಂಧ ಹೋರಾಟ ನಡೆಸುತ್ತಿದ್ದ ವಿಚಾರದಲ್ಲಿ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತಂದ ಆರೋಪದ ಮೇಲೆ ಮಹೇಶ್ ಶೆಟ್ಟಿ ತಿಮರೋಡಿ ಅವರನ್ನು ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರಿನ ಮಾನ್ವಿ ಪೊಲೀಸ್ ಠಾಣಾ ವ್ಯಾಪ್ತಿಗೆ 6 ತಿಂಗಳ ಕಾಲ ಗಡಿಪಾರು ಮಾಡಿ ಮಾರ್ಚ್ 13ರಂದು (ಮೂರನೇ ಬಾರಿಗೆ)



ಪುತ್ತೂರು ಉಪ ವಿಭಾಗಾಧಿಕಾರಿ ಆದೇಶಿಸಿದ್ದರು. ಈ ಆದೇಶ ರದ್ದುಪಡಿಸಬೇಕು ಎಂದು ಕೋರಿ ಮಹೇಶ್ ತಿಮರೋಡಿ ಹೈಕೋರ್ಟ್‌ಗೆ ತಕರಾರು ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಪೀಠ ಈ ಆದೇಶ ನೀಡಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು ಹಾಜರಾಗಿ, ಅರ್ಜಿ ವಿಚಾರಣೆಯನ್ನು ಏ.24 ಅಥವಾ 27ಕ್ಕೆ ಮುಂದೂಡಬೇಕು. ಅಲ್ಲಿಯವರೆಗೆ ಗಡಿಪಾರು ಆದೇಶ ಜಾರಿಗೆ ತಾತ್ಕಾಲಿಕ ತಡೆ ನೀಡಿ ಹೊರಡಿಸಿರುವ ಮಧ್ಯಂತರ ಆದೇಶವನ್ನು ಮುಂದುವರೆಸಬೇಕು ಎಂದು ಕೋರಿದರು.

ರಾಜ್ಯ ಸರ್ಕಾರದ ಪರ ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು, ಇದು ಮೂರನೇ ಸುತ್ತಿನ ವ್ಯಾಜ್ಯವಾಗಿದೆ. ಅರ್ಜಿದಾರರನ್ನು ಗಡಿಪಾರು ಮಾಡಿ ಮೂರನೇ ಬಾರಿಗೆ ಆದೇಶ ಹೊರಡಿಸಲಾಗಿದೆ. ಪ್ರಕರಣ ಸಂಬಂಧ ಮೇಲ್ಮನವಿ ಪ್ರಾಧಿಕಾರದಲ್ಲಿ ಪರಿಹಾರ ಕಂಡುಕೊಳ್ಳಲು ಅರ್ಜಿದಾರರಿಗೆ ಅವಕಾಶವಿದೆ. ಅರ್ಜಿದಾರರು ರೌಡಿಶೀಟರ್ ಆಗಿದ್ದು, ಅವರ ವಿರುದ್ಧ 26 ಪ್ರಕರಣಗಳು ದಾಖಲಾಗಿವೆ. ಈ ಹಿಂದೆ ಗಡಿಪಾರು ವಿಚಾರವಾಗಿ ಹೈಕೋರ್ಟ್ ಏಕಸದಸ್ಯ ಪೀಠ ವಿಚಾರಣೆ ನಡೆಸಿ ಆದೇಶ ಮಾಡಿದೆ ಎಂದು ತಿಳಿಸಿದರು.

ಈ ವೇಳೆ ಪ್ರತಿಕ್ರಿಯಿಸಿದ ಪೀಠ, ಅರ್ಜಿದಾರರ ವಿರುದ್ಧ ಗಡಿಪಾರು ಆದೇಶ ಅನುಷ್ಠಾನಕ್ಕೆ ತಾತ್ಕಾಲಿಕ ತಡೆ ನೀಡಿ ಮಧ್ಯಂತರ ಆದೇಶ ಮಾಡಲಾಗಿದೆ. ಆ ಆದೇಶವನ್ನು ಸುಖಾಸುಮ್ಮನೆ ಮುಂದುವರೆಸಲಾಗದು. ಸುಖಾಸುಮ್ಮನೆ ವಿಚಾರಣೆಯನ್ನು ಮುಂದೂಡಿಕೆಗೆ ಕೋರಬಾರದು. ವಿಚಾರಣೆಯನ್ನು ಏ.27ಕ್ಕೆ ಮುಂದೂಡಬೇಕಾದರೆ, ಮಧ್ಯಂತರ ಆದೇಶವನ್ನು ತೆರವುಗೊಳಿಸಲಾಗುವುದು ಎಂದು ಕಟುವಾಗಿಯೇ ನುಡಿಯಿತು.

ಆಗ ಅರ್ಜಿದಾರರ ಪರ ವಕೀಲರು, ಅರ್ಜಿ ವಿಚಾರಣೆಯನ್ನು ಏ.16ಕ್ಕೆ ನಿಗದಿಪಡಿಸಬೇಕು ಎಂದು ಕೋರಿದರು. ಅದಕ್ಕೆ ಒಪ್ಪಿದ ಪೀಠ, ಅರ್ಜಿ ವಿಚಾರಣೆಯ್ನು ಏ.16ಕ್ಕೆ ಮುಂದೂಡಿತು. ಅಲ್ಲಿಯವರೆಗೆ ಅರ್ಜಿದಾರರ ವಿರುದ್ಧದ ಗಡಿಪಾರು ಆದೇಶ ಜಾರಿಗೊಳಿಸದಂತೆ ಸರ್ಕಾರಕ್ಕೆ ಸೂಚಿಸುವ ಮೂಲಕ ಮಧ್ಯಂತರ ಆದೇಶವನ್ನು ಮುಂದೂಡಿತು. ಅಲ್ಲದೇ, ಏ.16ರಂದು ವಾದ ಮಂಡಿಸಲು ಸಂಪೂರ್ಣವಾಗಿ ಸಿದ್ಧವಾಗಿ ಬರುವಂತೆ ಅರ್ಜಿದಾರರ ಪರ ವಕೀಲರಿಗೆ ಮೌಖಿಕವಾಗಿ ಸೂಚಿಸಿತು.

ಪ್ರಕರಣದ ಹಿನ್ನೆಲೆ: ಅರ್ಜಿದಾರರನ್ನು ಈ ಹಿಂದೆ 2025ರ ಸೆ.18ರಂದು ಮತ್ತು ಡಿ.16ರಂದು ಒಂಬತ್ತು ತಿಂಗಳ ಕಾಲ ದಕ್ಷಿಣ ಕನ್ನಡ ಜಿಲ್ಲೆಯಿಂದ ರಾಯಚೂರಿನ ಮಾನ್ವಿ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಿ ಪುತ್ತೂರು ಉಪ ವಿಭಾಗಾಧಿಕಾರಿ ಆದೇಶಿಸಿದ್ದರು.

ಈ ಎರಡೂ ಬಾರಿಯ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಎರಡು ಬಾರಿ ಪ್ರಕರಣವನ್ನು ಉಪ ವಿಭಾಗಾಧಿಕಾರಿಗೆ ಹಿಂದಿರುಗಿಸಿ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಹೊಸದಾಗಿ ಆದೇಶ ಮಾಡಲು ಕೋರ್ಟ್ ಸೂಚಿಸಿತ್ತು.

ಬಳಿಕ ಮೂರನೇ ಬಾರಿಗೆ ಗಡಿಪಾರು ಮಾಡಿ ಮಾ.13ರಂದು ಪುತ್ತೂರು ಉಪ ವಿಭಾಗಾಧಿಕಾರಿ ಆದೇಶ ಮಾಡಿದ್ದಾರೆ. ಅದನ್ನು ಪ್ರಶ್ನಿಸಿ ಈ ಅರ್ಜಿ ಸಲ್ಲಿಸಲಾಗಿದೆ.

ಅರ್ಜಿಯನ್ನು ಮಾ.24ರಂದು ವಿಚಾರಣೆ ನಡೆಸಿದ್ದ ಹೈಕೋರ್ಟ್, ಗಡಿಪಾರು ಆದೇಶವನ್ನು ಏ.10ರವರೆಗೆ ಅನುಷ್ಠಾನಗೊಳಿಸದಂತೆ ಸೂಚಿಸಿ ಮಧ್ಯಂತರ ಆದೇಶ ಮಾಡಿತ್ತು.

# ಉಜ್ಜಯಿನಿಯಲ್ಲಿ ಕೊಳವೆ ಬಾವಿಗೆ ಬಿದ್ದು ಮಗು ಸಾವು: ಕುಟುಂಬಕ್ಕೆ 4 ಲಕ್ಷ ರೂ ಪರಿಹಾರ ಘೋಷಿಸಿದ ಸಿಎಂ

ಭೋಪಾಲ್ (ಮಧ್ಯಪ್ರದೇಶ) : ಉಜ್ಜಯಿನಿಯಲ್ಲಿ ಕೊಳವೆ ಬಾವಿಗೆ ಬಿದ್ದ ಎರಡೂವರೆ ವರ್ಷದ ಬಾಲಕ ಮೃತಪಟ್ಟಿದ್ದಾನೆ. ಈ ನಡುವೆ ಮಧ್ಯಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ಶುಕ್ರವಾರ ಸಂತಾಪ ಸೂಚಿಸಿದ್ದು, ಮೃತ ಬಾಲಕನ ಕುಟುಂಬಕ್ಕೆ 4 ಲಕ್ಷ ರೂಪಾಯಿ ನೆರವು ಘೋಷಿಸಿದ್ದಾರೆ.

ಗುರುವಾರ ಸಂಜೆ 7 ರಿಂದ 7:30 ರ ನಡುವೆ ಉಜ್ಜಯಿನಿಯಿಂದ ಸುಮಾರು 75 ಕಿ.ಮೀ ದೂರದಲ್ಲಿರುವ ಬದ್ನಗರದ ಝುಲಾರಿಯಾ ಗ್ರಾಮದಲ್ಲಿ ಭಗೀರಥ ಎಂಬ ಬಾಲಕ ಬಾವಿಗೆ ಬಿದ್ದಿದ್ದ. ಸುಮಾರು 23 ಗಂಟೆಗಳ ಪ್ರಯತ್ನದ ನಂತರ ಬಾಲಕನನ್ನು ಹೊರತೆಗೆಯಲಾಗಿತ್ತು. ತಕ್ಷಣವೇ ಆಸ್ಪತ್ರೆಗೆ ಸಾಗಿಸಲಾಗಿತ್ತು. ಆದರೆ ವೈದ್ಯರು ಬಾಲಕ ಮೃತಪಟ್ಟಿರುವುದಾಗಿ ಘೋಷಿಸಿದರು.

ಈ ಕುರಿತು ಸಿಎಂ ಮೋಹನ್ ಯಾದವ್ ಅವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದು, 'ಉಜ್ಜಯಿನಿಯ ಬದ್ನಗರದ ಝುಲಾರಿಯಾ ಗ್ರಾಮದಲ್ಲಿ ಬೋರ್‌ವೆಲ್‌ಗೆ ಬಿದ್ದು ಭಗೀರಥ ಸಾವನ್ನಪ್ಪಿದ ಸುದ್ದಿ ಅತ್ಯಂತ ದುಃಖಕರವಾಗಿದೆ. ಮಾಹಿತಿ ಪಡೆದ ತಕ್ಷಣ ಜಿಲ್ಲಾಡಳಿತ, ರಾಜ್ಯ ವಿಪತ್ತು ನಿರ್ವಹಣಾ ಪಡೆ (SDRF) ಮತ್ತು ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (NDRF) ತಂಡಗಳು ರಕ್ಷಣಾ ಕಾರ್ಯಾಚರಣೆ ಪ್ರಾರಂಭಿಸಿದವು. ಆದರೆ, ದುರಾದೃಷ್ಟವಶಾತ್ ಮಗುವನ್ನು ಉಳಿಸಲು ಸಾಧ್ಯವಾಗಲಿಲ್ಲ' ಎಂದು ಬರೆದುಕೊಂಡಿದ್ದಾರೆ.

'ದುಃಖಿತ ಕುಟುಂಬಕ್ಕೆ ನನ್ನ ಸಂತಾಪಗಳು. ಸರ್ಕಾರ ಮೃತ ಬಾಲಕನ ಕುಟುಂಬದ ಸದಸ್ಯರಿಗೆ 4 ಲಕ್ಷ ರೂ.ಗಳ ಆರ್ಥಿಕ ನೆರವು



ನೀಡುತ್ತಿದೆ. ಅಗಲಿದ ಆತ್ಮಕ್ಕೆ ಶಾಂತಿ ಮತ್ತು ಕುಟುಂಬಕ್ಕೆ ಈ ಅಪಾರ ನಷ್ಟವನ್ನು ಭರಿಸುವ ಶಕ್ತಿಯನ್ನು ನೀಡಲಿ ಎಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಜಿಲ್ಲಾ ಮುಖ್ಯ ವೈದ್ಯಕೀಯ ಮತ್ತು ಆರೋಗ್ಯ ಅಧಿಕಾರಿ ಡಾ. ಸುಯಾಶ್ ಶ್ರೀವಾಸ್ತವ ಅವರು ಈ ಬಗ್ಗೆ ಪ್ರತಿಕ್ರಿಯಿಸಿದ್ದು, ಚಿಕಿತ್ಸೆಯ ಸಮಯದಲ್ಲಿ ಮಗು ಮೃತಪಟ್ಟಿರುವುದು ಕಂಡುಬಂದಿದೆ ಎಂದು ಹೇಳಿದ್ದಾರೆ.

ಈ ಕುರಿತು ಮುಖ್ಯ ವೈದ್ಯಾಧಿಕಾರಿ ಡಾ. ಅಶೋಕ್ ಪಟೇಲ್ ಅವರು ಮಾತನಾಡಿ, ಮಗುವನ್ನು ಬಾವಿಯಿಂದ ರಕ್ಷಿಸುವ ಮೊದಲೇ ಅದು ಮೃತಪಟ್ಟಿತ್ತು. ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಮಗು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದೆ ಎಂದು ದೃಢಪಡಿಸಲಾಗಿದೆ. ಮಗು ಕೊಳವೆ ಬಾವಿಯಲ್ಲಿ ಸಿಲುಕಿಕೊಂಡಿದ್ದು, ದೇಹದ ಮೇಲೆ ಸವೆತದ ಗುರುತುಗಳು ಕಂಡುಬಂದಿವೆ. ಮೃತದೇಹವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಗಿದೆ ಎಂದು ತಿಳಿಸಿದ್ದಾರೆ.

ನಾವು ರಾಜಸ್ಥಾನದ ಪಾಲಿ ಜಿಲ್ಲೆಯ ನಿವಾಸಿಗಳು. ನಮ್ಮ ಮಗುವನ್ನು ಕಳೆದುಕೊಂಡಿದ್ದೇವೆ. ಜಾನುವಾರುಗಳನ್ನು ಸಾಕುವವರು ಮತ್ತು ಅಲೆಮಾರಿಗಳು.

ಸರ್ಕಾರವು ಸಾಧ್ಯವಾದಷ್ಟು ಸಹಾಯ ಮಾಡಬೇಕು ಎಂದು ಮಗುವಿನ ಚಿಕ್ಕಪ್ಪ ಮೋತಿಲಾಲ್ ದೇವಸಿ ಅವರು ಮನವಿ ಮಾಡಿದ್ದಾರೆ.

# ಬೆಂಗಳೂರಿನ ಪ್ರವಾಹ ಕಾಮಗಾರಿಯನ್ನು ಮೇ 30ರೊಳಗೆ ಮುಗಿಸಿ, ಇಲ್ಲವೇ ಅಮಾನತು ಎದುರಿಸಿ: ಅಧಿಕಾರಿಗಳಿಗೆ ಎಸಿಎಸ್ ಎಚ್ಚರಿಕೆ

ಬೆಂಗಳೂರು: ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರು ಮೇ 30ರೊಳಗೆ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು, ಇಲ್ಲವಾದರೆ ಅಮಾನತು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಯಲಹಂಕದ ಕೇಂದ್ರಿಯ ವಿಹಾರ, ಟಾಟಾ ನಗರ, ಹೆಬ್ಬಾಳ, ಮನ್ಯತಾ ಟೆಕ್ ಪಾರ್ಕ್, ಎಚ್‌ಬಿಆರ್ ಲೇಔಟ್, ಗೆದ್ದಲಹಳ್ಳಿ, ನಾಗವಾರ, ಸಾಯಿ ಲೇಔಟ್ ಮತ್ತು ಸಿಲ್ಕ್ ಬೋರ್ಡ್ ಸೇರಿದಂತೆ ಪ್ರವಾಹ ಸಮಸ್ಯೆ ಇರುವ ಪ್ರದೇಶಗಳನ್ನು ಪರಿಶೀಲಿಸಿದ ನಂತರ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ.

ನಿನ್ನೆ ಬೆಳಗ್ಗೆ ಗ್ರೇಟರ್ ಬೆಂಗಳೂರು ಅಥಾರಿಟಿ ಮುಖ್ಯ ಆಯುಕ್ತ ಎಂ ಮಹೇಶ್ವರ ರಾವ್ ಅವರೊಂದಿಗೆ ಪರಿಶೀಲನೆ ನಡೆಸಿದ ಗಿರಿನಾಥ್, ಪ್ರವಾಹ ತಡೆಗೆ ಕೈಗೊಳ್ಳಲಾಗುತ್ತಿರುವ ವಿವಿಧ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸಿದರು. ಕಳೆದ ನಾಲ್ಕು ವರ್ಷಗಳಲ್ಲಿ ಸಾಕಷ್ಟು ಕೆಲಸ ನಡೆದಿದೆ ಮತ್ತು ಬಹುತೇಕ ಪ್ರವಾಹವನ್ನು ತಡೆಯುವ ನಿರೀಕ್ಷೆಯಿದೆ ಎಂದು ಹೇಳಿದರು.

ಎಚ್‌ಬಿಆರ್ ಲೇಔಟ್ ಪರಿಶೀಲನೆ ವೇಳೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇಂಟೇಕ್ ವೆಲ್ ಕಾಮಗಾರಿಯ ವಿಳಂಬದ ಬಗ್ಗೆ ತುಷಾರ್ ಗಿರಿನಾಥ್ ಅಸಮಾಧಾನ ವ್ಯಕ್ತಪಡಿಸಿದರು. ಈ ಕೆಲಸವು ಅವರು ಹಿಂದಿನ ಬಿಬಿಎಂಪಿ ಆಯುಕ್ತರಾಗಿದ್ದ ಸಮಯದಿಂದಲೇ ಬಾಕಿ ಉಳಿದಿದೆ ಎಂದು ತಿಳಿದುಬಂದಿದೆ.

ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಕಲ್ಲುಗಳ ಇರುವಿಕೆಯಿಂದ ಕಾಮಗಾರಿ ವಿಳಂಬವಾಗಿದೆ ಎಂದು ಎಂಜಿನಿಯರ್ ತಿಳಿಸಿದ್ದಾರೆ. ಅವರು ಅಕ್ಟೋಬರ್ ತನಕ ಸಮಯ ಕೇಳಿದ್ದಾರೆ.



ಅಷ್ಟರೊಳಗೆ ಪೂರ್ಣಗೊಳಿಸದಿದ್ದರೆ ಅಮಾನತಿಗೆ ಶಿಫಾರಸು ಮಾಡಲಾಗುವುದು ಎಂದರು.

ಕೇಂದ್ರೀಯ ವಿಹಾರ ಅಪಾರ್ಟ್‌ಮೆಂಟ್ ಪ್ರದೇಶ ಮತ್ತು ಕೊಗಿಲು ಜಂಕ್ಷನ್‌ನಲ್ಲಿ ಪ್ರವಾಹ ತಡೆಯಲು ವೆಂಕಟಾಳ ಕೆರೆಯಿಂದ ಜಕ್ಕೂರು ಕೆರೆಗೆ 2.7 ಕಿಮೀ ಉದ್ದದ, 35 ಮೀಟರ್ ಅಗಲದ ಸ್ಟಾರ್ಮ್ ವಾಟರ್ ಡ್ರೇನ್ (ಎಸ್‌ಡಬ್ಲ್ಯುಡಿ) ನಿರ್ಮಾಣ ಮಾಡಲಾಗುತ್ತದೆ. ಎರಡೂ ಬದಿಗಳಲ್ಲಿ 30 ಅಡಿ ಅಗಲದ ರಸ್ತೆ ನಿರ್ಮಾಣವಾಗಲಿದೆ. ಮೊದಲ ಹಂತದಲ್ಲಿ 1.5 ಕಿಮೀ ಉದ್ದದ ಎಸ್‌ಡಬ್ಲ್ಯುಡಿ ಗೋಡೆ ಹಾಗೂ ಡ್ರೇನ್ ನಿರ್ಮಿಸಲಾಗಿದೆ. ಟಾಟಾ ನಗರದಲ್ಲಿ ಪ್ರವಾಹ ತಡೆ ಕ್ರಮಗಳ ಬಗ್ಗೆ ಮಾಹಿತಿ ಪಡೆದ ಅವರು, ದೊಡ್ಡಬೊಮ್ಮಸಂದ್ರ ಕೆರೆಯಿಂದ 900 ಮೀಟರ್ ಉದ್ದದ, 20 ಅಡಿ ಅಗಲದ ಸ್ಟಾರ್ಮ್ ವಾಟರ್ ಡ್ರೇನ್ ನಿರ್ಮಾಣ ನಡೆಯುತ್ತಿದೆ ಎಂದು ಹೇಳಿದರು.

ಹೆಬ್ಬಾಳದಲ್ಲಿ 15.90 ಕೋಟಿ ರೂಪಾಯಿ ವೆಚ್ಚದ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದ ಅವರು, 16 ಎಕರೆ ಅಕ್ರಮ ಆಕ್ರಮಣ ತೆರವು ಮಾಡಿದ ನಂತರ ವೆಟ್ಲ್ಯಾಂಡ್ ಮತ್ತು ಇನ್‌ಲೆಟ್ ಕಾಮಗಾರಿಗಳು ಆರಂಭವಾಗಲಿವೆ ಎಂದು ಹೇಳಿದರು. ಹೆಬ್ಬಾಳ ಜಂಕ್ಷನ್ ಕೆಳಭಾಗದಿಂದ ಮಳೆನೀರನ್ನು ಕೆರೆಗೆ ಹರಿಸುವ ವ್ಯವಸ್ಥೆ ರೂಪಿಸಲಾಗುತ್ತಿದೆ ಎಂದರು.

ವಿಮಾನ ನಿಲ್ದಾಣ ದಿಕ್ಕಿನ ಮುಖ್ಯ ರಸ್ತೆಯ ಡೌನ್ ರ್ಯಾಂಪ್, ಸರ್ವಿಸ್ ರಸ್ತೆ ಮತ್ತು ಬಸ್ ನಿಲ್ದಾಣ ಸೇರಿದಂತೆ ನಾಲ್ಕು ನೀರು ನಿಲ್ಲುವ ಸ್ಥಳಗಳಿಗೆ ಶಾಶ್ವತ ಪರಿಹಾರಗಳನ್ನು ಜಾರಿಗೆ ತರಲಾಗಿದೆ ಎಂದು ಹೇಳಿದರು. ತುಮಕೂರು ರಸ್ತೆ ಲೂಪ್ ಡೌನ್ ರ್ಯಾಂಪ್ ಕಾಮಗಾರಿಯನ್ನು 15 ದಿನಗಳಲ್ಲಿ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಿದರು. ಮಾನ್ಯತಾ ಟೆಕ್ ಪಾರ್ಕ್ ಮತ್ತು ವೀರನಪಾಳ್ಯ ಔಟರ್ ರಿಂಗ್ ರಸ್ತೆಯಲ್ಲಿ ನೀರು ನಿಲ್ಲುವ ಸಮಸ್ಯೆಗೆ ಪರಿಹಾರವಾಗಿ ಭೂಸ್ವಾಧೀನ ಪ್ರಕ್ರಿಯೆ ನಡೆಯುತ್ತಿದ್ದು, ಖಾಸಗಿ ವೆಚ್ಚದಲ್ಲಿ ಸ್ಟಾರ್ಮ್ ವಾಟರ್ ಡ್ರೇನ್ ನಿರ್ಮಾಣ ಮಾಡಲಾಗುತ್ತಿದೆ. ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ನೀರು ನಿಲ್ಲುವ ಸಮಸ್ಯೆ ನಿವಾರಣೆಗೆ ಕಲ್ವರ್ಟ್ ಕಾಮಗಾರಿ ನಡೆಯುತ್ತಿದ್ದು, ಎತ್ತರವನ್ನು 1.5 ಮೀಟರ್‌ನಿಂದ 3.5 ಮೀಟರ್‌ಗೆ ಹೆಚ್ಚಿಸಲಾಗುತ್ತಿದೆ ಹಾಗೂ ಗ್ರೇಟಿಂಗ್ ಅಳವಡಿಸಲಾಗುತ್ತಿದೆ ಎಂದರು.

ಸಿಲ್ಕ್ ಬೋರ್ಡ್‌ನಿಂದ ರಗ್ಗಿಗುಡ್ಡದವರೆಗೆ ನಿರ್ಮಿಸಿರುವ ಡಬಲ್ ಡೆಕ್ಕರ್ ಫ್ಲೈಓವರ್‌ನಲ್ಲಿ ಸಂಚಾರ ಸುಗಮವಾಗಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಜೊತೆಗೆ, ಪಿಲ್ಲರ್ ಕಾಮಗಾರಿ ಪೂರ್ಣಗೊಂಡ ಪ್ರದೇಶಗಳಲ್ಲಿ ಬ್ಯಾರಿಕೇಡ್‌ಗಳನ್ನು ತೆರವುಗೊಳಿಸಿ ರಸ್ತೆ ಅಭಿವೃದ್ಧಿಪಡಿಸಲು ಸೂಚಿಸಿದರು.

# ICTC ಕೇಂದ್ರದ ಸಿಬ್ಬಂದಿ ಎಡವಟ್ಟು ಆರೋಪ: ಗರ್ಭಿಣಿಯ HIV ಪರೀಕ್ಷಾ ವರದಿಯಲ್ಲಿ ನೆಗೆಟಿವ್ ಬದಲಿಗೆ ಪಾಸಿಟಿವ್ ದಾಖಲು

ಸೋಲಾಪುರ(ಮಹಾರಾಷ್ಟ್ರ): ಅಕ್ಕಲ್ಕೋಟ್‌ನಲ್ಲಿರುವ ಸರ್ಕಾರಿ ಸ್ವಾಮ್ಯದ ಐಸಿಟಿಸಿ ಕೇಂದ್ರದ ಸಿಬ್ಬಂದಿ ಎಡವಟ್ಟಿನಿಂದ ಗರ್ಭಿಣಿಯ ಎಚ್‌ಐವಿ ಪರೀಕ್ಷಾ ವರದಿಯಲ್ಲಿ ನೆಗೆಟಿವ್ ಬದಲಿಗೆ ಪಾಸಿಟಿವ್ ಎಂದು ದಾಖಲಾಗಿದೆ. ಈ ವರದಿಯ ನಂತರ, ಮಹಿಳೆಯ ಪತಿ ಮತ್ತು ಅತ್ತೆ – ಮಾವ ಆಕೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿ ಮನೆಯಿಂದ ಹೊರಹಾಕಿದ್ದಾರೆ.

ಘಟನೆ ಬಳಿಕ ಮಹಿಳೆಯ ಕುಟುಂಬಸ್ಥರು ವಿವಿಧ ಸರ್ಕಾರಿ ಮತ್ತು ಖಾಸಗಿ ಪರೀಕ್ಷಾ ಕೇಂದ್ರಗಳಲ್ಲಿ ಮತ್ತೊಮ್ಮೆ ಎಚ್‌ಐವಿ ಪರೀಕ್ಷೆ ಮಾಡಿಸಿದಾಗ ಎಲ್ಲ ವರದಿಗಳಲ್ಲಿ ಎಚ್‌ಐವಿ ನೆಗೆಟಿವ್ ಬಂದಿದೆ. ಇದರಿಂದ ಆಕ್ರೋಶಗೊಂಡ ಸಾಮಾಜಿಕ ಕಾರ್ಯಕರ್ತರು ಜಿಲ್ಲಾ ಸರ್ಜನ್ ಕಚೇರಿಗೆ ಧಾವಿಸಿ ಎಚ್‌ಐವಿ ಪಾಸಿಟಿವ್ ವರದಿ ನೀಡಿ ಎಡವಟ್ಟು ಮಾಡಿದ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ತನಿಖೆಗೆ ಸಮಿತಿ ನೇಮಕ: ಜಿಲ್ಲಾ ಸರ್ಜನ್ ಡಾ. ವರ್ಷಾ ದೋಯಿಫೋಡೆ ಅವರು ಈ ಘಟನೆ ಸಂಬಂಧ ತನಿಖೆಗಾಗಿ ಮೂವರು ಸದಸ್ಯರ ಸಮಿತಿಯನ್ನು ನೇಮಿಸಿದ್ದಾರೆ. ಒಮ್ಮೆ ಎಚ್‌ಐವಿ ಪಾಸಿಟಿವ್ ವರದಿ ಬಂದರೆ, ಅದು ಮತ್ತೆ ನೆಗೆಟಿವ್ ಎಂದು ಬರುವುದಿಲ್ಲ




ಎಂದು ಸ್ಪಷ್ಟಪಡಿಸಿದ್ದಾರೆ.

ವರದಿಯಿಂದ ಆಘಾತಕ್ಕೊಳಗಾದ ಮಹಿಳೆ: ವರದಿಯಿಂದ ಗರ್ಭಿಣಿ ಮಾನಸಿಕ ಹಿಂಸೆ ಅನುಭವಿಸುವಂತಾಗಿದೆ ಎಂದು ಸಾಮಾಜಿಕ ಕಾರ್ಯಕರ್ತ ಯೋಗೇಶ್ ಪವಾರ್ ಕಿಡಿಕಾರಿದ್ದಾರೆ. ಯೋಗೇಶ್ ಪವಾರ್, ಮಹಿಳೆಯೊಂದಿಗೆ ಜಿಲ್ಲಾ ಸರ್ಜನ್ ಡಾ. ವರ್ಷಾ ದೋಯಿಫೋಡೆ ಅವರ ಕಚೇರಿಗೆ ಭೇಟಿ ವರದಿ ಬಗ್ಗೆ ವಿಚಾರಿಸಿ, ಐಸಿಟಿಸಿ ಕೇಂದ್ರದ ಸಿಬ್ಬಂದಿಯ ನಿರ್ಲಕ್ಷ್ಯದ ಬಗ್ಗೆ ಪ್ರಶ್ನಿಸಿದ್ದಾರೆ.

ಇತರ ಪ್ರಯೋಗಾಲಯಗಳಲ್ಲಿ ಮತ್ತೊಮ್ಮೆ ಪರೀಕ್ಷೆ: ಐಸಿಟಿಸಿ ಕೇಂದ್ರದಲ್ಲಿ ನಡೆಸಿದ ಪರೀಕ್ಷೆಯಲ್ಲಿ ಮಹಿಳೆಯ ಎಚ್‌ಐವಿ ವರದಿ ಪಾಸಿಟಿವ್ ಎಂದು ಕಂಡುಬಂದ ನಂತರ, ಎಸ್‌ಡಿಎಚ್ ಸೋಲಾಪುರ, ಐಸಿಟಿಸಿ ಕೇಂದ್ರ ಮತ್ತು ಹಿಂದ್‌ಲ್ಯಾಬ್ಸ್‌ನಂತಹ ಮಾನ್ಯತೆ ಪಡೆದ ಪ್ರಯೋಗಾಲಯಗಳಲ್ಲಿ ಮರು ಪರೀಕ್ಷೆಗಳನ್ನು ನಡೆಸಲಾಯಿತು. ಈ ಎಲ್ಲ ಪರೀಕ್ಷೆಗಳಲ್ಲಿ ಎಚ್‌ಐವಿ – ಪಿಸಿಆರ್ ಮತ್ತು ವೈರಲ್ ಲೋಡ್ ಪರೀಕ್ಷೆಯಲ್ಲಿ 'ಆರ್‌ಎನ್‌ಎ ಪತ್ತೆಯಾಗಿಲ್ಲ' ಎಂದು ವರದಿ ಬಂದಿದೆ.

ತಪ್ಪು ವರದಿಯಿಂದಾಗಿ ಮಹಿಳೆಗೆ ಅನಗತ್ಯ ಔಷಧಗಳನ್ನು ನೀಡಲಾಯಿತು, ಇದು ಅವರ ಆರೋಗ್ಯದ ಮೇಲೆ ಪರಿಣಾಮ ಬೀರಿದೆ ಎಂದು ವರದಿಯಾಗಿದೆ. ಈ ಇಡೀ ಘಟನೆಯು ಆರೋಗ್ಯ ಇಲಾಖೆಯ ಕಾರ್ಯನಿರ್ವಹಣೆಯ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಘಟನೆ ಸಂಬಂಧ ಮಹಿಳೆಗೆ ನ್ಯಾಯ ಮತ್ತು ಉಂಟಾದ ಹಾನಿಗೆ ಪರಿಹಾರ ಸಿಗಬೇಕು ಎಂದು ಸಾಮಾಜಿಕ ಕಾರ್ಯಕರ್ತರು ಆಗ್ರಹಿಸಿದ್ದಾರೆ. ಜೊತೆಗೆ ಮಹಿಳೆ ಮೇ.1 ರಂದು ಮುಖ್ಯಮಂತ್ರಿ ಕಚೇರಿಯ ಮುಂದೆ ಪ್ರತಿಭಟನೆ ನಡೆಸುವುದಾಗಿ ಮತ್ತು ಕ್ರಮ ಕೈಗೊಳ್ಳದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಸೂಕ್ತ ತನಿಖೆಯ ಭರವಸೆ ನೀಡಿದ ಜಿಲ್ಲಾ ಸರ್ಜನ್: ಮತ್ತೊಂದೆಡೆ, ಜಿಲ್ಲಾ ಸರ್ಜನ್ ಡಾ. ವರ್ಷಾ ದೋಯಿಫೋಡೆ ಈ ಸಂಬಂಧ ತಕ್ಷಣವೇ ತನಿಖಾ ಸಮಿತಿಯಿಂದ ತನಿಖೆ ಮಾಡಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಮಹಿಳೆಗೆ ಭರವಸೆ ನೀಡಿದ್ದಾರೆ.

# ವೃಂದಾವನದ ದೋಣಿ ದುರಂತದಲ್ಲಿ ಒಂದೇ ಕುಟುಂಬದ 7 ಜನರ ಸಾವು: ಮುಗಿಲು ಮುಟ್ಟಿದ ಸಂಬಂಧಿಕರ ಆಕ್ರಂದನ

ಮಥುರಾ (ಉತ್ತರ ಪ್ರದೇಶ) : ಬಂಕೆ ಬಿಹಾರಿಯ ದರ್ಶನ ಪಡೆಯಲು ವೃಂದಾವನಕ್ಕೆ ತೆರಳಿದ್ದ ಪಂಜಾಬ್‌ನ ಲುಧಿಯಾನದ ಭಕ್ತರು ದೊಡ್ಡ ದುರಂತದಿಂದಾಗಿ ಬಲಿಯಾಗಿದ್ದಾರೆ. ಶುಕ್ರವಾರ, ಕೆ.ಸಿ. ಘಾಟ್‌ನಲ್ಲಿ ಪಾಂಟೂನ್ ಸೇತುವೆಗೆ ಡಿಕ್ಕಿ ಹೊಡೆದ ನಂತರ ಸ್ಟೀಮರ್ (ಬೋಟ್) ಮಗುಚಿ ಬಿದ್ದ ಪರಿಣಾಮ ಅದರಲ್ಲಿದ್ದ 10 ಭಕ್ತರು ಸಾವನ್ನಪ್ಪಿದ್ದರು. ಮೃತರಲ್ಲಿ ಏಳು ಮಂದಿ ಒಂದೇ ಕುಟುಂಬಕ್ಕೆ ಸೇರಿದವರು ಎಂಬುದು ತಿಳಿದುಬಂದಿದೆ.

ಅಪಘಾತದ ಸಮಯದಲ್ಲಿ ಸುಮಾರು 40 ಭಕ್ತರು ಸ್ಟೀಮರ್‌ನಲ್ಲಿದ್ದರು. ಘಟನೆಯ ನಂತರ ತಡರಾತ್ರಿಯವರೆಗೂ ರಕ್ಷಣಾ ಕಾರ್ಯಾಚರಣೆ ಮುಂದುವರೆಯಿತು. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಮತ್ತು ಸೇನೆಯ ಸಿಬ್ಬಂದಿ ಯಮುನಾ ನದಿಯಲ್ಲಿ ಮುಳುಗುತ್ತಿದ್ದ 22 ಭಕ್ತರನ್ನು ಯಶಸ್ವಿಯಾಗಿ ರಕ್ಷಿಸಿದ್ದಾರೆ. ಅದರಲ್ಲಿ ಸುಮಾರು ಐದು ಜನರು ಕಾಣೆಯಾಗಿದ್ದು, ಅವರಿಗಾಗಿ ಹುಡುಕಾಟ ಮುಂದುವರೆದಿದೆ.

ಯಮುನಾ ನದಿಯಲ್ಲಿ ಸಂಭವಿಸಿದ ಈ ಅಪಘಾತದಲ್ಲಿ ಪ್ರಾಣ ಕಳೆದುಕೊಂಡ ಒಂದೇ ಕುಟುಂಬದ ಏಳು ಸದಸ್ಯರನ್ನು ಕವಿತಾ ಬೆಹ್ಲ್, ಚರಣ್‌ಜಿತ್, ಪಿಂಕಿ (ಚರಣ್‌ಜಿತ್ ಅವರ ಪತ್ನಿ), ಮಧುರ್ ಬೆಹ್ಲ್ (ವಿಜಯ್



ಕುಮಾರ್ ಅವರ ಮಗ), ಇಶಾಂತ್ ಕಟಾರಿಯಾ, ಸಪ್ನಾ ಮತ್ತು ಹಸನ್ ಎಂದು ಗುರುತಿಸಲಾಗಿದೆ. ಈ ಕುಟುಂಬವು ಲುಧಿಯಾನದ ಜಗ್ರಾಂವ್‌ನ ಗೀತಾ ಕಾಲೋನಿಯವರು ಎಂಬುದು ತಿಳಿದುಬಂದಿದೆ. ಅದೇ ರೀತಿ, ರಾಕೇಶ್ ಗುಲಾಟಿ (ಲುಧಿಯಾನದ 2ನೇ ಹಂತದ ದುಗ್ರಿ ನಿವಾಸಿ), ಆಶಾ ಮಿದ್ಧಾ (ಭಿವಾನಿಯ ನಿವಾಸಿ) ಮತ್ತು ಮೀನು ಬನ್ಸಾಲ್ (ಲುಧಿಯಾನದ 2 ನೇ ಹಂತದ ದುಗ್ರಿ ನಿವಾಸಿ) ಕೂಡ ಈ ದುರಂತದಲ್ಲಿ ಸಾವನ್ನಪ್ಪಿದ್ದಾರೆ.

ತಡರಾತ್ರಿಯವರೆಗೂ ಮುಂದುವರೆದ ರಕ್ಷಣಾ ಕಾರ್ಯಾಚರಣೆ : ಯಮುನಾ ನದಿಯಲ್ಲಿ ಸ್ಟೀಮರ್ ಮಗುಚಿ ಬಿದ್ದಿದೆ ಎಂಬ ವರದಿಗಳು ಬಂದ ಕೂಡಲೇ ಜಿಲ್ಲಾಡಳಿತ ಮತ್ತು ಎನ್‌ಡಿಆರ್‌ಎಫ್ ತಂಡ ಸ್ಥಳಕ್ಕೆ ಧಾವಿಸಿತು. ತಕ್ಷಣವೇ ರಕ್ಷಣಾ ಕಾರ್ಯಾಚರಣೆ ಆರಂಭಿಸಿ 22 ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು.

ಅದಾಗ್ಯೂ, ಸ್ಟೀಮರ್ ಪತ್ತೆಯಾಗದ ಕಾರಣ, ಎಸ್‌ಡಿಆರ್‌ಎಫ್ ಮತ್ತು ಸೇನಾ ಸಿಬ್ಬಂದಿಯನ್ನು ಕರೆಸಬೇಕಾಯಿತು. ಬೋಟ್ ಹುಡುಕಾಟ ತಡರಾತ್ರಿಯವರೆಗೂ ಮುಂದುವರೆಯಿತು. ಈ ವೇಳೆ ಇತರ ಬೋಟ್‌ನವರು ಮತ್ತು ದೋಣಿಗಳು ಅವರ ಸಹಾಯಕ್ಕೆ ಬಂದಿವೆ ಎಂದು ವರದಿಯಾಗಿದೆ. ಬೋಟ್‌ಲ್ಲಿದ್ದ ಎಲ್ಲಾ ಭಕ್ತರು ಭಜನೆಗಳನ್ನು ಹಾಡುತ್ತಿದ್ದರು. ಆದರೆ, ಇದ್ದಕ್ಕಿದ್ದಂತೆ ಬಲವಾದ ಗಾಳಿ ಬೀಸಿದ್ದರಿಂದಾಗಿ ಸ್ಟೀಮರ್ ಪಾಂಟೂನ್ ಸೇತುವೆಗೆ ಡಿಕ್ಕಿ ಹೊಡೆದು, ಪಲ್ಟಿಯಾಗಿ ಸುಮಾರು 30 ಅಡಿ ಆಳಕ್ಕೆ ಮುಳುಗಿತು ಎಂದು ತಿಳಿದುಬಂದಿದೆ.

ಸಹಾಯವಾಣಿ ಸಂಖ್ಯೆಯನ್ನು ನೀಡಲಾಗಿದೆ : ಜಿಲ್ಲಾಡಳಿತವು 0565 2403200 ಮತ್ತು 9454417512 ಸೇರಿದಂತೆ ಸಹಾಯವಾಣಿ ಸಂಖ್ಯೆಗಳನ್ನು ಬಿಡುಗಡೆ ಮಾಡಿದೆ. ಜೊತೆಗೆ ಹೆಚ್ಚುವರಿ ಜಿಲ್ಲಾ ಮ್ಯಾಜಿಸ್ಟ್ರೇಟ್ (ಹಣಕಾಸು ಮತ್ತು ಕಂದಾಯ) ಡಾ. ಪಂಕಜ್ ವರ್ಮಾ (9454417583) ಮತ್ತು ಎಸ್ಪಿ (ಗ್ರಾಮೀಣ) ಸುರೇಶ್ ಚಂದ್ರ ರಾವತ್ (9454401103) ಅವರ ಮೊಬೈಲ್ ಸಂಖ್ಯೆಗಳನ್ನೂ ಸಹ ನೀಡಿದೆ. ಅಪಘಾತಕ್ಕೆ ಸಂಬಂಧಿಸಿದ ಯಾವುದೇ ಮಾಹಿತಿ ಅಥವಾ ಸಹಾಯಕ್ಕಾಗಿ ಈ ಸಂಖ್ಯೆಗಳನ್ನು ಸಂಪರ್ಕಿಸಬಹುದು. ಪ್ರಸ್ತುತ, ಮೃತರ ಶವಗಳನ್ನು ಶವಾಗಾರಕ್ಕೆ ಸಾಗಿಸಲಾಗಿದೆ ಮತ್ತು ಅವರ ಕುಟುಂಬಗಳಿಗೆ ಸೂಕ್ತ ಮಾಹಿತಿ ನೀಡಲಾಗಿದೆ. ಜಿಲ್ಲಾಡಳಿತವು ಕುಟುಂಬಗಳಿಗೆ ಸಾಧ್ಯವಿರುವ ಎಲ್ಲ ಸಹಾಯವನ್ನು ನೀಡುವುದಾಗಿ ಭರವಸೆ ನೀಡಿದೆ.

# ಆರ್‌ಸಿ ಸ್ಟುಡಿಯೋಸ್ ನಿರ್ಮಾಣದ 'ಫಾದರ್' ಡಬ್ಬಿಂಗ್ ಕಂಪ್ಲೀಟ್: ಡಾರ್ಲಿಂಗ್ ಕೃಷ್ಣ, ಪ್ರಕಾಶ್ ರಾಜ್ ಸಿನಿಮಾಗೆ ಕಾತರ

ಕನ್ನಡದ ಖ್ಯಾತ ನಿರ್ದೇಶಕ ಆರ್.ಚಂದ್ರು ಅವರ ಚಲನಚಿತ್ರ ನಿರ್ಮಾಣ ಸಂಸ್ಥೆ 'ಆರ್.ಸಿ.ಸ್ಟುಡಿಯೋಸ್'ಗೆ ಸಿಎಂ ಸಿದ್ಧರಾಮಯ್ಯ ಚಾಲನೆ ಕೊಟ್ಟು, 'ಫಾದರ್' ಶೀರ್ಷಿಕೆಯ ಸಿನಿಮಾವನ್ನು ಲಾಂಚ್ ಮಾಡಿದ್ದು, ನಿಮಗೆ ತಿಳಿದಿರುವ ವಿಚಾರವೇ. ಸದ್ಯ ಚಿತ್ರದ ಡಬ್ಬಿಂಗ್ ಕೆಲಸಗಳು ಪೂರ್ಣಗೊಂಡಿದ್ದು, ಬಿಡುಗಡೆಗೆ ಸಜ್ಜಾಗುತ್ತಿದೆ. ಆರಂಭದಿಂದಲೂ ಸಾಕಷ್ಟು ಕುತೂಹಲ ಮೂಡಿಸಿರುವ ಈ ಚಿತ್ರದ ಪ್ರಮುಖ ಪಾತ್ರಗಳಲ್ಲಿ ಲವ್ ಮಾಕ್ಟೇಲ್ ಖ್ಯಾತಿಯ ಡಾರ್ಲಿಂಗ್ ಕೃಷ್ಣ ಮತ್ತು ಬಹುಭಾಷಾ ನಟ ಪ್ರಕಾಶ್ ರಾಜ್ ಅಭಿನಯಿಸಿದ್ದಾರೆ. ಅಪರೂಪದ ಕಥಾಹಂದರ ಹೊಂದಿರುವ ಆರ್.ಸಿ.ಸ್ಟುಡಿಯೋಸ್ ನಿರ್ಮಾಣದ ಚಿತ್ರದ ಮಾತಿನ ಜೋಡಣೆ ಮುಕ್ತಾಯವಾಗಿದೆ. ಇತ್ತೀಚೆಗೆ ಪ್ರಕಾಶ್ ರಾಜ್ ಅವರು ಶ್ರೀರಂಗಪಟ್ಟಣದಲ್ಲಿರುವ ತಮ್ಮ ಸ್ಟುಡಿಯೋದಲ್ಲೇ ತಮ್ಮ ಪಾತ್ರಕ್ಕೆ ಡಬ್ಬಿಂಗ್ ಮಾಡಿದ್ದಾರೆ.

ಡಾರ್ಲಿಂಗ್ ಕೃಷ್ಣ ಅಭಿನಯದ ಲವ್ ಮಾಕ್ಟೇಲ್ 3 ಮಾರ್ಚ್ 19ಕ್ಕೆ ತೆರೆಕಂಡು ಭರ್ಜರಿ ಯಶಸ್ಸು ಕಂಡಿದೆ. ಸದ್ಯ ಫಾದರ್ ಚಿತ್ರದ ಪ್ರಚಾರ ಕಾರ್ಯಕ್ಕೂ ಚಾಲನೆ ದೊರಕಿದೆ. ಚಿತ್ರವನ್ನು ಆದಷ್ಟು ಬೇಗ ತೆರೆಗೆ ತರುವ ಸಿದ್ಧತೆ ನಡೆಯುತ್ತಿದೆ. ಈಗಾಗಲೇ ಈ ಚಿತ್ರದ ಫಸ್ಟ್ ಲುಕ್ ಹಾಗೂ ಸುದೀಪ್ ಅವರು ಅನಾವರಣಗೊಳಿಸಿದ ಟೀಸರ್ ಎಲ್ಲರ ಮನ ಗೆದ್ದಿದೆ.

ಫಾದರ್ ಅಂದರೆ ಒಂದು



ಶಕ್ತಿ. ತಮ್ಮ ನಟನೆ ಮೂಲಕ ಎಲ್ಲರ ಗಮನ ಸೆಳೆಯುವ ಪ್ರಕಾಶ್ ರಾಜ್ ಅವರೇ ಇಲ್ಲಿ "ಫಾದರ್". ಇನ್ನೂ, ಡಾರ್ಲಿಂಗ್ ಕೃಷ್ಣ ಕೂಡಾ ಚಿತ್ರದ ಪ್ರಮುಖ ಆಕರ್ಷಣೆ. ಇವರಿಬ್ಬರ ಕಾಂಬಿನೇಶನ್‌ನಲ್ಲಿ ಮೂಡಿ ಬರುತ್ತಿರುವ "ಫಾದರ್" ಈಗಾಗಲೇ ಸಾಕಷ್ಟು ನಿರೀಕ್ಷೆ ಹುಟ್ಟಿಸಿದೆ. ಅದಕ್ಕೆ ಕಾರಣ, "ಲವ್ ಮಾಕ್ಟೇಲ್" ಜೋಡಿ ಇಲ್ಲೂ ಒಂದಾಗಿದೆ. ಹೌದು, ಡಾರ್ಲಿಂಗ್ ಕೃಷ್ಣ ಅವರ ಜೊತೆ ಅಮೃತಾ ಅಯ್ಯಂಗಾರ್ ಇದ್ದಾರೆ ಎನ್ನುವುದು ಚಿತ್ರದ ಮತ್ತೊಂದು. ಇವರೊಂದಿಗೆ ಅನೇಕ ನುರಿತ ಕಲಾವಿದರು ತಾರಾಬಳಗದಲ್ಲಿದ್ದಾರೆ.

ಆರ್.ಚಂದ್ರು ನಿರ್ಮಾಣದ ಚಿತ್ರಗಳಿಗೆ ಅವರದ್ದೇ ಆದ ಅಭಿಮಾನಿ ಬಳಗವಿದೆ. ಅದರಂತೆ ಫಾದರ್ ಕೂಡಾ ಅನೇಕರ ನಿರೀಕ್ಷೆಯನ್ನು ಹೆಚ್ಚಿಸಿದೆ.

ತಂದೆ – ಮಗನ ಬಾಂಧವ್ಯದ ಫಾದರ್ ಈ ವರ್ಷದ ಹಿಟ್ ಲಿಸ್ಟ್‌ಗೆ ಸೇರುವ ಎಲ್ಲಾ ಲಕ್ಷಣಗಳೂ ಇವೆ. ಅಭಿಮಾನಿಗಳು ಸಹ ಈ ಚಿತ್ರದ ಬಿಡುಗಡೆಗೆ ಕಾತರದಿಂದ ಕಾಯುತ್ತಿದ್ದಾರೆ. 'ಕಬ್ಜ' ಮೂಲಕ ಗಮನ ಸೆಳೆದಿದ್ದ ಆರ್.ಚಂದ್ರು ಅವರೀಗ ಫಾದರ್ ಮೂಲಕ 'ತಾಜ್ ಮಹಲ್', 'ಚಾರ್ ಮಿನಾರ್' ರೀತಿಯ ಎಮೋಷನಲ್ ಸಿನಿಮಾ ಕೊಡಲು ಸಜ್ಜಾಗಿದ್ದಾರೆ. ಹೊಸ ಪ್ರತಿಭೆಗಳಿಗೆ ಅವಕಾಶ ಕೊಡುವ ಉದ್ದೇಶದೊಂದಿಗೆ ಸ್ಥಾಪನೆಗೊಂಡ ಆರ್.ಸಿ.ಸ್ಟುಡಿಯೋಸ್‌ನ ಚೊಚ್ಚಲ ಚಿತ್ರ ಇದಾಗಿದ್ದು, ಕಳೆದ ವರ್ಷಾಂತ್ಯ ಅದ್ದೂರಿ ಪ್ರಚಾರ ಕಾರ್ಯಕ್ರಮ ನಡೆಸಿತ್ತು. 'ಫಾದರ್' ಥೀಮ್ ವಿಡಿಯೋ ಗ್ರ್ಯಾಂಡ್ ರಿಲೀಸ್ ಆಗಿತ್ತು. ಆರ್.ಚಂದ್ರು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ತಮ್ಮ ತಂದೆಯನ್ನೇ ಕರೆಸಿದ್ದು ಬಹುತೇಕರ ಮೆಚ್ಚುಗೆಗೆ ಪಾತ್ರವಾಗಿತ್ತು.

ಅಲಂಕಾರ್ ಪಾಂಡ್ಯನ್ ಅವರ ಸಹಯೋಗದಲ್ಲಿ ಆರ್.ಸಿ.ಸ್ಟುಡಿಯೋಸ್ ಈ ಸಿನಿಮಾವನ್ನು ನಿರ್ಮಿಸಿದೆ. ಮುಂಬೈನ ಖ್ಯಾತ ಉದ್ಯಮಿ ಆನಂದ್ ಪಂಡಿತ್ ಚಿತ್ರವನ್ನು ಅರ್ಪಿಸುತ್ತಿದ್ದಾರೆ. ರಾಜ್ ಮೋಹನ್ ನಿರ್ದೇಶನದ ಚಿತ್ರಕ್ಕೆ ಸುಜ್ಞಾನ್ ಛಾಯಾಗ್ರಹಣ, ನಕುಲ್ ಅಭ್ಯಂಕರ್ ಸಂಗೀತ ಸಂಯೋಜನೆಯಿದೆ. ನೋಡುಗರನ್ನು ಭಾವುಕ ಪಯಣಕ್ಕೆ ಕರೆದೊಯ್ಯುವ ಹೃದಯ ಸ್ಪರ್ಶಿ ಚಿತ್ರವಾಗಲಿದೆ ಅನ್ನೋದು ತಂಡದ ವಿಶ್ವಾಸ.

# ಕೇರಳದ ಒಂಬತ್ತು ದೇವಾಲಯಗಳಿಗೆ 22.5 ಕೋಟಿ ದೇಣಿಗೆ ನೀಡಿದ ಅನಂತ್ ಅಂಬಾನಿ!

ಕೊಚ್ಚಿ: ತಮ್ಮ ಹುಟ್ಟುಹಬ್ಬದ ಸಂದರ್ಭದಲ್ಲಿ ಅನಂತ್ ಅಂಬಾನಿ ಕೇರಳದ ಪಾರಂಪರಿಕ ರಚನೆಗಳ ಸಂರಕ್ಷಣೆ ಮತ್ತು ಒಂಬತ್ತು ದೇವಾಲಯಗಳ ಅಭಿವೃದ್ಧಿಗಾಗಿ 22.55 ಕೋಟಿ ರೂ.ಗಳನ್ನು ದೇಣಿಗೆ ನೀಡಿದ್ದಾರೆ. ಶುಕ್ರವಾರ ತಮ್ಮ 31ನೇ ಹುಟ್ಟುಹಬ್ಬವನ್ನು ಆಚರಿಸಿಕೊಂಡ ಅನಂತ್, ಏಪ್ರಿಲ್ 7 ರಂದು ಗುರುವಾಯೂರ್ ಶ್ರೀ ಕೃಷ್ಣ ದೇವಸ್ಥಾನ



ಮತ್ತು ತಳಿಪರಂಬ ರಾಜರಾಜೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿದರು. ಗುರುವಾಯೂರ್ ದೇವಸ್ಥಾನಕ್ಕೆ 6 ಕೋಟಿ ಮತ್ತು ರಾಜರಾಜೇಶ್ವರ ದೇವಸ್ಥಾನಕ್ಕೆ 12 ಕೋಟಿ ದೇಣಿಗೆ ಘೋಷಿಸಿದರು.

ಹೆಚ್ಚುವರಿಯಾಗಿ 4.55 ಕೋಟಿ– ಹೆಚ್ಚಾಗಿ ನವೀಕರಣ ಮತ್ತು ಪುನಃಸ್ಥಾಪನೆ ಕೆಲಸಕ್ಕಾಗಿ ತಲಶ್ಶೇರಿ ತಿರುವಂಗಡ್ ಶ್ರೀರಾಮಸ್ವಾಮಿ ದೇವಸ್ಥಾನ, ತ್ರಿಶೂರ್ ಕಡವಲ್ಲೂರು ಶ್ರೀರಾಮಸ್ವಾಮಿ ದೇವಸ್ಥಾನ, ತಿರೂರ್ ತ್ರಿಪ್ರಂಗೋಡೆ ಶಿವ ದೇವಸ್ಥಾನ, ತಿರೂರ್ ತೃಕ್ಕಂಡಿಯೂರು ಮಹಾದೇವ ದೇವಸ್ಥಾನ, ಗುರುವಾಯೂರು ಬಳಿಯ ಅರಿಯನ್ನೂರು ಹರಿಕನ್ಯಕಾ ದೇವಸ್ಥಾನ, ಮಲಪ್ಪುರಂನ ವಳ್ಳಿಕುನ್ನುನಲ್ಲಿರುವ ನಿರಂಕೈತ ಕೊಟ್ಟ ಭಗವತಿ ದೇವಸ್ಥಾನ ಮತ್ತು ಪರಪ್ಪನಂಗಡಿ ನೆಡುಂಪರಂಬು ಭಗವತಿ ದೇವಸ್ಥಾನಗಳಿಗೆ ನವೀಕರಣ ಮತ್ತು ಜೀರ್ಣೋದ್ಧಾರ ಕಾರ್ಯಗಳಿಗಾಗಿ ಜ್ಯೋತಿಷಿ ಪರಪ್ಪನಂಗಡಿ ಉನ್ನಿಕೃಷ್ಣ ಪಣಿಕ್ಕರ್ ಅವರ ಸಲಹೆ ಮೇರೆಗೆ ದೇಣಿಗೆ ನೀಡಲಾಗಿದೆ.

'ಶತಮಾನಗಳಷ್ಟು ಹಳೆಯದಾದ ಗೋಪುರದ ನವೀಕರಣ ಮತ್ತು ಮೇಲೆ ಹೆಲಿಪ್ಯಾಡ್ ಹೊಂದಿರುವ ಬಹು–ಹಂತದ ಪಾರ್ಕಿಂಗ್ ಸೌಲಭ್ಯವನ್ನು ನಿರ್ಮಿಸಲು ನಾವು ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಸಲ್ಲಿಸಿದ್ದೇವೆ. ಅನಂತ್ ಅವರು ಡಿಪಿಆರ್ ಅನ್ನು ಅನುಮೋದಿಸಿದ್ದಾರೆ ಮತ್ತು ಮೊದಲ ಕಂತಾಗಿ 3 ಕೋಟಿ ಹಂಚಿಕೆ ಮಾಡಿದ್ದಾರೆ. ನಾವು ಪುರಾತತ್ವ ಇಲಾಖೆ ಮತ್ತು ದೇವಸ್ವಂ ಮಂಡಳಿಯಿಂದ ಅನುಮತಿ ಪಡೆದಿದ್ದೇವೆ ಮತ್ತು 10 ದಿನಗಳಲ್ಲಿ ಕೆಲಸ ಪ್ರಾರಂಭವಾಗಲಿದೆ' ಎಂದು ರಾಜರಾಜೇಶ್ವರ ದೇವಾಲಯದ ಆಡಳಿತಾಧಿಕಾರಿ ಕೆ.ಪಿ. ವಿನಯನ್ ತಿಳಿಸಿದ್ದಾರೆ.

ಅನಂತ್ ಅವರು ನೀಡಿರುವ 60 ಲಕ್ಷ ದೇಣಿಗೆಯನ್ನು ನವೀಕರಣ ಮತ್ತು ಗರ್ಭಗುಡಿಯ ಛಾವಣಿಯನ್ನು ತಾಮ್ರದ ಹಾಳೆಗಳಿಂದ ಮುಚ್ಚಲು ಬಳಸಲಾಗುವುದು ಎಂದು ತಿರುವಂಗಡ್ ದೇವಸ್ಥಾನದ ಜಯರಾಮ್ ಮೂಸಾದ್ ಹೇಳಿದರು. ಪ್ರಾಚೀನ ವೈದಿಕ ವಿದ್ವಾಂಸ ಕಾರ್ಯಕ್ರಮವಾದ ಕಡವಲ್ಲೂರು ಅನ್ಯೋನ್ಯಮಕ್ಕೆ ಪ್ರಸಿದ್ಧವಾದ ಕಡವಲ್ಲೂರು ದೇವಸ್ಥಾನದಲ್ಲಿ, ಗರ್ಭಗುಡಿಯ ಸುತ್ತಲಿನ ವಿಳಕ್ಕುಮಡವ್ ಮತ್ತು ಪಾದಚಾರಿ ಮಾರ್ಗವನ್ನು ನವೀಕರಿಸಲು 70 ಲಕ್ಷ ದೇಣಿಗೆ ನೀಡಲಾಗಿದೆ. ಕಾಣಿಪ್ಪಯ್ಯೂರ್ ನಾರಾಯಣನ್ ನಂಬೂದಿರಿಪಾಡ್ ಅವರೊಂದಿಗೆ ಸಮಾಲೋಚಿಸಿದ ನಂತರ ದೇವಸ್ಥಾನದ ಅಧಿಕಾರಿಗಳು ಯೋಜನೆಯನ್ನು ಅಂತಿಮಗೊಳಿಸಿದ್ದಾರೆ.

ತ್ರಿಪ್ರಂಗೋಡ್ ದೇವಾಲಯದಲ್ಲಿ, ಟಿಪ್ಪು ಸುಲ್ತಾನನಿಂದ ನಾಶವಾದ ಪಶ್ಚಿಮ ಗೋಪುರ, ಕೂತಂಬಲಂ ಮತ್ತು ವಿಳಕ್ಕುಮಾಡಂಗಳ ಪುನರ್ನಿರ್ಮಾಣಕ್ಕಾಗಿ ಆಡಳಿತವು ವಿವರವಾದ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯ ಅಂದಾಜು ವೆಚ್ಚ 4 ಕೋಟಿ ಮತ್ತು ಅನಂತ್ ಈಗ 1 ಕೋಟಿ ಒದಗಿಸಿದ್ದಾರೆ. ಒಂಬತ್ತನೇ ಶತಮಾನದಲ್ಲಿ ನಿರ್ಮಿಸಲಾದ ತ್ರಿಕ್ಕಂಡಿಯೂರ್ ದೇವಾಲಯದ ಜೀರ್ಣೋದ್ಧಾರಕ್ಕಾಗಿ 60 ಲಕ್ಷ ಒದಗಿಸಲಾಗಿದೆ. ಅರಿಯನ್ನೂರ್ ದೇವಾಲಯದಲ್ಲಿನ ಕೊಳದ ನವೀಕರಣಕ್ಕಾಗಿ 50 ಲಕ್ಷ ದೇಣಿಗೆ ನೀಡಿದ್ದಾರೆ.

ಗರ್ಭಗುಡಿ ನವೀಕರಣ, ಪಾರಂಪರಿಕ ಕೆತ್ತನೆಗಳ ರಕ್ಷಣೆ ಮತ್ತು ಪತ್ತುಪುರ ಪುನರ್ನಿರ್ಮಾಣಕ್ಕಾಗಿ ವಳ್ಳಿಕುನ್ನು ನಿರಂಕೈತಕೋಟ ದೇವಸ್ಥಾನಕ್ಕೆ 75 ಲಕ್ಷ, ಅಲ್ಲದೆ ಮಂಡಲ ಉತ್ಸವದ ವಾರ್ಷಿಕ ಅನ್ನದಾನಕ್ಕೆ ಪರಪ್ಪನಂಗಡಿ ನೆಡುಂಪರಂಬು ಭಗವತಿ ದೇವಸ್ಥಾನಕ್ಕೆ 40 ಲಕ್ಷ ನೀಡಲಾಗಿದೆ.

# ಬೆಂಗಳೂರಿನಲ್ಲಿ 101 ಪ್ರವಾಹ ಪೀಡಿತ ಸ್ಥಳಗಳು

ಬೆಂಗಳೂರು: ಬೆಂಗಳೂರಿನ ಐದು ಮಹಾನಗರ ಪಾಲಿಕೆಗಳಲ್ಲಿ ಒಟ್ಟು 101 ಪ್ರವಾಹ ಪೀಡಿತ ಸ್ಥಳಗಳ ಪೈಕಿ 52 ಸ್ಥಳಗಳನ್ನು ಇನ್ನೂ ಸರಿಪಡಿಸಿಲ್ಲ. TNIEಗೆ ಲಭ್ಯವಿರುವ ಮಾಹಿತಿ ಪ್ರಕಾರ, 49 ಸ್ಥಳಗಳನ್ನು ಮಳೆಗಾಲಕ್ಕೆ ಸಿದ್ಧಗೊಳಿಸಲಾಗಿದೆ.

ಬೆಂಗಳೂರು ಪಶ್ಚಿಮ ಮಹಾನಗರ ಪಾಲಿಕೆಯು 48 ದುರ್ಬಲ ಸ್ಥಳಗಳೊಂದಿಗೆ ಅತಿ ಹೆಚ್ಚು ಸಂಖ್ಯೆಯಲ್ಲಿದ್ದರೆ, ದಕ್ಷಿಣ ಮಹಾನಗರ ಪಾಲಿಕೆಯು 24 ಸ್ಥಳಗಳನ್ನು, ಪೂರ್ವ ಮಹಾನಗರ ಪಾಲಿಕೆಯು 20 ಸ್ಥಳಗಳನ್ನು, ಉತ್ತರ ಮಹಾನಗರ ಪಾಲಿಕೆಯು ಆರು ಮತ್ತು ಬೆಂಗಳೂರು ಕೇಂದ್ರ ನಗರ ಪಾಲಿಕೆಯು ಕೇವಲ ಮೂರು ಪ್ರವಾಹ ಪೀಡಿತ ಸ್ಥಳಗಳನ್ನು ಹೊಂದಿದೆ.

ರಾಜ್ಯ ಸರ್ಕಾರದ 1,500 ಕೋಟಿ ಅನುದಾನವನ್ನು ನಿಯಮಿತ ಹೂಳು ತೆಗೆಯುವಿಕೆ ಮತ್ತು ವಾರ್ಷಿಕ ನಿರ್ವಹಣೆಗಾಗಿ ಕಾಯ್ದಿರಿಸಲಾಗಿದ್ದು, 26 ದುರ್ಬಲ ಸ್ಥಳಗಳನ್ನು ಸರಿಪಡಿಸುವ ಕೆಲಸ ನಡೆಯುತ್ತಿದೆ. ವಿಶ್ವ ಬ್ಯಾಂಕ್ ಮತ್ತು ರಾಷ್ಟ್ರೀಯ ವಿಪತ್ತು ತಗ್ಗಿಸುವಿಕೆ ನಿಧಿಯ ಸಹಾಯದಿಂದ, ಬಾಕಿ ಇರುವ 52 ಸ್ಥಳಗಳಲ್ಲಿ 21 ಸ್ಥಳಗಳ ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶುಕ್ರವಾರ ನಗರವನ್ನು ಪರಿಶೀಲಿಸಿದ ನಂತರ ಮುಂಗಾರು ಪೂರ್ವಸಿದ್ಧತಾ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ACS) ತುಷಾರ್ ಗಿರಿನಾಥ್, ತುರ್ತು ಸಂದರ್ಭಗಳಲ್ಲಿ ಅಗ್ನಿಶಾಮಕ ದಳದ ತಂಡಗಳೊಂದಿಗೆ ಸಮನ್ವಯ ಸಾಧಿಸುವಂತೆ ಪಾಲಿಕೆಯ ತಂಡಗಳಿಗೆ ನಿರ್ದೇಶನ ನೀಡಿದರು. GBA ಮಿತಿಯಲ್ಲಿ ಮಳೆನೀರಿನ ಚರಂಡಿಗಳನ್ನು (SWD) ಹೂಳೆತ್ತುವ ಮೊದಲು ಮತ್ತು ನಂತರ ಡ್ರೋನ್ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಉಃಂ ಅಧಿಕಾರಿಗಳಿಗೆ ಸೂಚಿಸಿದರು.

Edited, Printed, Published & Owned by : ARUN KUMAR K . Printed at: ARUN PRINTERS & PUBLISHERS ", No. 20, Sri Kempamma Nilaya, Kashi Vishwanatha Road, kote Temple, K.R.Puram, Bangalore 560 036. Published at : No. 20, Sri Kempamma Nilaya, Kashi Vishwanatha Road, kote Temple, K.R.Puram, Bangalore 560 036. Editor: ARUN KUMAR K.